MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 05 | ಸಂಚಿಕೆ: 44 | ಮಂಗಳವಾರ :02-12-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 44 | TUESDAY : 02-12-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ನಾನು ಮತ್ತು ಸಿದ್ದರಾಮಯ್ಯ ಸೋದರರರಿದ್ದಂತೆ : ಡಿ.ಕೆ.ಶಿ



**ಬೆಂಗಳೂರು, ಡಿ.1–** ಸಿಎಂ ಸಿದ್ದರಾಮಯ್ಯ ಮತ್ತು ತಾವು ಸಹೋದರರಂತಿದ್ದೇವೆ. ನಮಲ್ಲಿ ಯಾವುದೇ ಗುಂಪುಗಾರಿಕೆಯಾಗಲಿ, ಬಣಗಳಾಗಲಿ ಇಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.ಕೆಂಗಲ್ ಹನುಮಂತಯ್ಯ ನವರ ಪುಣ್ಯಸರಣೆ ಅಂಗವಾಗಿ ವಿಧಾನಸೌಧದ ಮುಂಭಾಗದಲ್ಲಿರುವ ಅವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮಲ್ಲಿ ಯಾವುದೇ ಒಡಕ್ಕಿಲ್ಲ. ಮಾಧ್ಯಮಗಳ ಒತ್ತಡಕ್ಕಾಗಿ ನಾವಿಬ್ಬರು ಪರಸ್ಪರ ಉಪಹಾರಕೂಟ ನಡೆಸಿದ್ದೇವೆ. ನಮಗೆ ಇದ್ಯಾವುದು ಅಗತ್ಯ ಇಲ್ಲ. ಡಿ.ಕೆ.ಶಿವಕುಮಾರ್ ಆಗಲಿ ಸಿದ್ದರಾಮಯ್ಯ ಅವರದಾಗಲಿ ಯಾವ ಗುಂಪುಗಳು ಇಲ್ಲ. 140 ಮಂದಿ ಶಾಸಕರು ನನ್ನ ಜೊತೆಗಿದ್ದಾರೆ ಎಂದರು.

ಹುಟ್ಟುವಾಗ ಒಬ್ಬರೇ ಸಾಯುವಾಗಲು ಒಬ್ಬರೇ ರಾಜಕೀಯ, ಪಕ್ಷ ಎಂದ ಮೇಲೆ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳಿದರು.

**ಕೇಂದ್ರದ ವಿರುದ್ಧ ಆಕ್ರೋಶ:**ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿಯವರ ವಿರುದ್ಧ ನ್ಯಾಷನಲ್ ಹೆರಾಲ್ ಕುರಿತಂತೆ ಮತ್ತೊಂದು ಪ್ರಕರಣ ದಾಖಲಿಸಿರುವುದು ಅನ್ಯಾಯದ ಪರಮಾವಧಿ. ಕಿರುಕುಳಕ್ಕೂ ಒಂದು ಮಿತಿ ಇದೆ. ಪ್ರಕರಣ ದಾಖಲಿಸುವ ಅಗತ್ಯ ಇರಲಿಲ್ಲ, ಇದು ಖಂಡನೀಯ. ಇಂತಹ ಕಿರುಕುಳ ಅಗತ್ಯವೇ ಇರಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನ್ಯಾಷನಲ್ ಹೆರಾಲ್ಡ್ ಸಂಸ್ಥೆಯ ಶೇರುಗಳಿಗೆ ಹಿಂದೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಜವಾಬ್ದಾರರು ಎಂದು ಹೇಳಿದರು.

ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನೇಕ ಸರ್ಕಾರದ ಸಂಸ್ಥೆಗಳಿಗೆ ಮುಖ್ಯಸ್ಥರಾಗಿದ್ದೇವೆ. ಮುಖ್ಯಮಂತ್ರಿಯವರು ಕರ್ನಾಟಕ ವಿದ್ಯುತ್ ನಿಗಮಕ್ಕೆ ಅಧ್ಯಕ್ಷರಾಗಿದ್ದರೆ, ನಾನು ನೀರಾವರಿ ನಿಗಮಗಳಿಗೆ ಅಧ್ಯಕ್ಷನಾಗಿದ್ದೇನೆ.**(2ನೇ ಪುಟಕ್ಕೆ)**

## ದತ್ತಿಗಳು ಕನ್ನಡ ಸಾಹಿತ್ಯ ಪರಿಷತ್ತನ್ನು ಪೋಷಿಸಿವೆ : ಕೆ.ಕರಿಯಪ್ಪ



**ಯುವಮಾರ್ಗ ಸುದ್ದಿ**

**ಸಿಂಧನೂರು,ಡಿ.1–**ಕಳೆದ ಶತಮಾನದಿಂದ ಇತ್ತಿಚಿಗೆ ಕನ್ನಡ ಪರ ಮನಸ್ಸುಗಳು ಕನ್ನಡ ಸಾಹಿತ್ಯದ ಮೇಲಿನ ಅಭಿಮಾನ ಅಭಿರುಚಿ ಸ್ವಾಭಿಮಾನದ ಪ್ರತೀಕವಾಗಿ ತಮ್ಮ ಮನೆಯ ಹಿರಿಯರ ಸವಿ ನೆನಪಿಗಾಗಿ ದತ್ತಿಯನ್ನು ನೀಡುವುದರ ಮೂಲಕ ಈ ನೆಲದ ಅಸ್ಮಿತೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ವಿವಿಧ ಕಾರ್ಯಕ್ರಮಗಳ ಸುವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ದತ್ತಿಗಳು ಸಹಾಯಕವಾಗಿವೆ ಹಾಗಾಗಿ ದತ್ತಿಗಳು ಕನ್ನಡ ಸಾಹಿತ್ಯ ಪರಿಷತ್ತನ್ನು ಪೋಷಿಸುವಲ್ಲಿ ಮಹತ್ತರ ಪಾತ್ರವಹಿಸುವೆ ಎಂದು ದತ್ತಿದಾನಿ ಬಿ.ಜೆ.ಪಿ ಮುಖಂಡರಾದ ಕೆ ಕರಿಯಪ್ಪ ಅವರು ಎಲ್ ಬಿ ಕೆ ಪದವಿ ಪೂರ್ವ ಮತ್ತು ನೊಬೆಲ್ ಪದವಿ ಮಹಾವಿದ್ಯಾಲಯದಲ್ಲಿ ನಡೆದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ 2025-26 ನೇ ಸಾಲಿನ ದತ್ತಿ ಉಪನ್ಯಾಸ ಮಾಲಿಕೆಯಲ್ಲಿ ಭಾಗವಹಿ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ವಿಷಯ ಮಂಡನೆ ಮಾಡಿದ ಡಾ.ಗಂಗಾಧರ ವೀರಘಂಟೆಯವರು ಮಾತಾನಾಡಿ ಪುರಾತನದಿಂದಲೂ ಕುರಿ ಸಾಕಾಣಿಕೆಯನ್ನು ಕೇವಲ ಕುರುಬ ಸಮುದಾಯದ ಅವರು ಮಾತ್ರ ಕುಲ ಕಸಬಾಗಿ ಮುಂದುವರಿಸಿಕೊಂಡು ಬಂದಿದ್ದಾರೆ. ಆದರೆ ಆಧುನಿಕ ಕಾಲದ ಸಂದರ್ಭದಲ್ಲಿ ಕುಲ ಕಸಬಾಗಿ ಉಳಿಯದೇ ಎಲ್ಲಾ ಜಾತಿ ಧರ್ಮಯರಲ್ಲಿಯೂ ಉಪಜೀವನದ ಒಂದು ಉದ್ದಿಮೆಯಾಗಿ ಮುನ್ನೆಸಿಕೊಂಡಿರವುದು ಆಶದಾಯಕ ಬೆಳವಣಿಗೆ ಇಂತಹ ಕಾರ್ಯ ಕೈಗೂಡವಲ್ಲಿ ದೈಹಿಕವಾಗಿ, ಮಾನಸಿಕವಾಗಿ, ಸಾಮಜಿಕವಾಗಿ ಆರ್ಥಿಕ ವಾಗಿ ಆಧ್ಯಾತ್ಮಿಕವಾಗಿ ಗಟ್ಟಿಯಾದರೆ ಮಾತ್ರ ಸಾದ್ಯ ಎಂದು ಮಕ್ಕಳಿಗೆ ಕರೆ ನೀಡಿದರು.

ಮುಖ್ಯ ಅಥಿತಿಗಳಾದ ಎಸ್ ಶರಣೆಗೌಡ ಮಾತಾಡಿ ,ತಾವು 2003-4 ರಲ್ಲಿ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಈ ದತ್ತಿ ಉಪನ್ಯಾಸ ಮಾಲಿಕೆಯ ಹೋಸ ಚಿಂತನ ಕಾರ್ಯಕ್ರಮ ಜಾರಿಗೆ ಬಂದುದ್ದು ಎಂದು ಶ್ಲಾಘಿಸಿದರು.ಹನಿಗಳನ್ನು ಹೇಳಿ ಮಕ್ಕಳನ್ನು ಮನರಂಜಿಸಿದರು.ಇದೆ ಸಂದರ್ಭದಲ್ಲಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬೀರಪ್ಪ ಸಭೋಜಿ ಮಾತಾನಾಡಿ ಸಂಸ್ಥೆಯ ಪಠ್ಯ ,ಫಲಿತಾಂಶ ಮತ್ತು ಪಠ್ಯೇತರ ಚಟುವಟಿಕೆಗಳ ಬಗ್ಗೆ ಹರ್ಷ ವ್ಯಕ್ತಪಡಿಸಿ, ಚುಟಕಗಳನ್ನು ಹೇಳಿ ಮನರಂಜಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕೊಡಮಾಡುವ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಬಾಜಿ ನರಾದ ಹುಸೇನ್ ಬಾಷಾ ಅವರನ್ನು ಪರಿಷತ್ತಿನಿಂದ ಸನ್ಮಾನಿಸಲಾಯಿತು ಹಾಗೇನೆ **(2ನೇಪುಟಕ್ಕೆ..)**

## ಸರ್ಕಾರದಿಂದ 11 ಪಬ್ಲಿಕ್ ಶಾಲೆಗಳು ಮಂಜೂರು: ಶಾಸಕ ಹಂಪನಗೌಡ

**ಯುವಮಾರ್ಗ ಸುದ್ದಿ**

**ಸಿಂಧನೂರು,ಡಿ.1–**ಅಲಬನೂರು, ದಿದ್ದಿಗಿ, ಜಾಲಿಹಾಳ, ಪಗಡದಿನ್ನಿ, ಬಾದರ್ಲಿ, ಮಾಡಸಿರವಾರ, ರೌಡಕುಂದ, ಮುಕ್ಕುಂದ, ಜವಳಗೇರಾ, ಆಯನೂರು, ಸಾಲಗುಂದ, ಗ್ರಾಮಗಳಿಗೆ ಸಿಂಧನೂರು ತಾಲೂಕಿನ ಇತಿಹಾಸದಲ್ಲಿ ಸರ್ಕಾರ ಮೊಟ್ಟಮೊದಲ ಬಾರಿಗೆ 11 ಪಬ್ಲಿಕ್ ಶಾಲೆಗಳನ್ನು ಮಂಜೂರು ಮಾಡಿದೆ ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ನೂತನವಾಗಿ ಪ್ರಾರಂಭವಾದ ಶಾಸಕರ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನಮ್ಮ ಕಲ್ಯಾಣ ಕರ್ನಾಟಕ ಭಾಗದ ಶೈಕ್ಷಣಿಕ ಅಭಿವೃದ್ಧಿಗಾಗಿ ಸರ್ಕಾರ ಪ್ರತಿವರ್ಷ 15 ಕೋಟಿ ಅನುದಾನ ನೀಡುತ್ತಿದೆ. ಸಿಂಧನೂರು ತಾಲೂಕಿಗೆ ಈ ವರ್ಷ 6 ಪಬ್ಲಿಕ್ ಶಾಲೆಗಳನ್ನು ಮಂಜೂರು ಮಾಡಿದೆ ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು.

1 ನೇ ತರಗತಿಯಿಂದ 12ನೇ ತರಗತಿಯವರೆಗೆ ಶಿಕ್ಷಣ ನೀಡುವ ಪಬ್ಲಿಕ್ ಶಾಲೆಯಲ್ಲಿ ಒಟ್ಟು 12 ಸಾವಿರ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಒಂದೇ ಸೂರಿನ ಅಡಿಯಲ್ಲಿ ಪಬ್ಲಿಕ್ ಶಾಲೆಗೆ ಬೇಕಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.



ಒಂದು ಪಬ್ಲಿಕ್ ಶಾಲೆಗೆ 6 ರಿಂದ 7 ಕೋಟಿ ತನಕ ಅನುದಾನ ನೀಡಲಾಗಿದೆ. ತಾಲೂಕಿನ ಅಲಬನೂರು, ಬಾದರ್ಲಿ, ಪಗಡದಿನ್ನಿ, ದಿದ್ದಿಗಿ, ಜಾಲಿಹಾಳ, 6 ಪಬ್ಲಿಕ್ ಶಾಲೆಗಳ ಸೇರಿದಂತೆ ತಾಲೂಕಿಗೆ ಒಟ್ಟು ಸರ್ಕಾರ 11 ಪಬ್ಲಿಕ್ ಶಾಲೆಗಳನ್ನು ಮಂಜೂರು ಮಾಡಿದೆ. ಅಲ್ಲದೆ ತಾಲೂಕಿನಲ್ಲಿ ಈಗಾಗಲೇ 60 ಎಲ್.ಕೆಜಿ, ಯುಕೆಜಿ, ಸಹ ಆರಂಭವಾಗಿದೆ. ರಾಜ್ಯದಾದ್ಯಂತ ಪಬ್ಲಿಕ್ ಶಾಲೆಗಳಿಗೆ ಮೊದಲನೇ ವರ್ಷ 750 ಕೋಟಿ, ಎರಡನೇ ವರ್ಷವು ಸಹ 750 ಕೋಟಿ ಒಟ್ಟು 1500 ಕೋಟಿ ವೆಚ್ಚದಲ್ಲಿ ಪಬ್ಲಿಕ್ ಶಾಲೆಗಳ ಕಾಮಗಾರಿ ಪ್ರಾರಂಭ ಮಾಡಲಾಗಿದೆ ಎಂದರು.

## ಗೋರ್ಕಲ್ ಗ್ರಾಮ ಪಂಚಾಯಿತಿಗೆ ಗಾಂಧಿ ಗ್ರಾಮ ಪುರಸ್ಕಾರ



**ಯುವಮಾರ್ಗ ಸುದ್ದಿ**

**ಮಾನ್ವಿ,ಡಿ.1–** ರಾಜ್ಯ ಸರ್ಕಾರದ ಗ್ರಾಮೀಣಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆ ವತಿಯಿಂದ ನೀಡಲಾಗುವ ಗಾಂಧಿ ಗ್ರಾಮ ಪುರಸ್ಕಾರವು2023-24 ನೇ ಸಾಲಿಗೆ ತಾಲೂಕಿನ ಗೋರ್ಕಲ್ ಗ್ರಾಮ ಪಂಚಾಯಿತಿಗೆ ದೊರೆತ್ತಿದ್ದು. ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ರಾಜ್ಯದ ಮುಖ್ಯ ಮಂತ್ರಿ ಸಿದ್ದರಾಮಯ್ಯರವರಿಂದ ಗೋರ್ಕಲ್ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಕ್ತರ್ ಪಾಷಾ ಪ್ರಶಸ್ತಿ ಪತ್ರ ಹಾಗೂ ಸ್ಮಾರಣಿಕೆಯನ್ನು ಪಡೆದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಲಕ್ಷ್ಮೀನಾಗೇಶ ಇದ್ದರು

ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಹಾಗೂ ರಾಜ್ಯ ಗ್ರಾಮೀಣಭೀವೃದ್ಧಿ ಸಚಿವರಾದ ಪ್ರೀಯಾಂಕ ಖರ್ಗೆ ಉಪಸ್ಥಿತರಿದ್ದರು.

## ಶಕ್ತಿ ಯೋಜನೆಯಿಂದ ಪ್ರಯಾಣಿಕರಿಗೆ ಅನುಕೂಲ : ಅರುಣಕುಮಾರ ಪಾಟೀಲ್

**ಯುವಮಾರ್ಗ ಸುದ್ದಿ**

**ಲಿಂಗಸುಗೂರು,ಡಿ.1–** ರಾಜ್ಯದಲ್ಲಿ ಗ್ಯಾರಂಟಿ ಯೋಜನೆಯ ಬಳಿಕ ಸರ್ಕಾರಿ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣಿಕರ ಓಡಾಟ ಹೆಚ್ಚಿದೆ ಮತ್ತು ಸಾರಿಗೆ ನಿಗಮವೂ ಆರ್ಥಿಕವಾಗಿ ಸುಸ್ಥಿತಿಯಲ್ಲಿ ಸಾಗುತ್ತಿದೆ. ಮುಂದಿನ ದಿನಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೆಚ್ಚಿನ ಬಸ್ಸುಗಳ ಸೇವೆಯ ಜೊತೆಗೆ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕ ರಿಗೆ ಉತ್ತಮ ಸೌಲತ್ತುಗಳನ್ನು ಒದಗಿಸಲು ಯೋಜನೆ ರೂಪಿಸಲಾಗುವುದು ಅದಕ್ಕಾಗಿ ಬಸ್ ನಿಲ್ದಾಣ, ಡೀಪೊ ಸೇರಿದಂತೆ ಭೇಟಿ ನೀಡುತ್ತಿರುವೇ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣ ಕುಮಾರ ಪಾಟೀಲ್ ಹೇಳಿದರು.

ಪಟ್ಟಣದ ಬಸ್ ನಿಲ್ದಾಣ, ಸಾರಿಗೆ ಘಟಕ ವೀಕ್ಷಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ ಕೆಲವೇ ದಿನಗಳಲ್ಲಿ 400 ಹೊಸ ಬಸ್ಸುಗಳ ಬರಲಿವೆ. ಇದರಿಂದ ಮಾರ್ಗಗಳನ್ನು ಹೆಚ್ಚಿನ ಎಲ್ಲಾ ಕಡೆ ಸರ್ಕಾರಿ ಸಾರಿಗೆ ವ್ಯವಸ್ಥೆ ಮಾಡಲಾಗುವುದು. ಮತ್ತು ಪ್ರಯಾಣಿಕರಿಗೆ ಬಸ್ಸಿನ ದರವು ಖಾಸಗಿ ಸಾರಿಗೆಯಂತೆ ಹಬ್ಬ ಹರಿದಿನಗಳಲ್ಲಿ ಬದಲಾದಂತೆ ದರ ಹೆಚ್ಚಿಸಲಾಗುವುದಿಲ್ಲ ಎಲ್ಲಾ ಕಾಲಕ್ಕೂ ಅನ್ವಯವಾಗುವಂತೆ ಒಂದೇ ಬೆಲೆ ನಿಗದಿಪಡಿಸಲಾಗುವುತ್ತದೆ. ಸ್ಲಿಪರ್ ಕೋಚ್ ಸೇರಿದಂತೆ ಹವಾನಿಯಂತ್ರಿತ ಬಸ್ಸುಗಳ ಹೆಚ್ಚಿನ ಸಂಖ್ಯೆಯಲ್ಲಿ ಓಡಿಸಲು ಕ್ರಮ ವಹಿಸಲಾಗುವುದು. ಪ್ರಯಾಣಿಕರಿಗೆ ಉತ್ಕೃಷ್ಟ ಸೇವೆ ನೀಡಲು 2000 ಹುದ್ದೆಗಳ ಭರ್ತಿಗೆ **(2ನೇ ಪುಟಕ್ಕೆ)**



## ಏಡ್ಸ್ ಕಾಯಿಲೆ ನಿರ್ಮೂಲನೆಗೆ ಸಾರ್ವಜನಿಕರು ಸಹಕರಿಸಬೇಕು: ನ್ಯಾ.ಹೆಚ್.ಎ.ಸಾತ್ವಿಕ್



**ಯುವಮಾರ್ಗ ಸುದ್ದಿ**

**ರಾಯಚೂರು.ಡಿ.1–** ಭಯಾನಕ ಏಡ್ಸ್ ಕಾಯಿಲೆಯನ್ನು 2030ರ ವೇಳೆಗೆ ಸಂಪೂರ್ಣ ನಿರ್ಮೂಲನೆ ಮಾಡಲು ಸರ್ಕಾರ, ಆರೋಗ್ಯ ಇಲಾಖೆ ಹತ್ತು-ಹಲವು ಯೋಜನೆಗಳನ್ನು ಹಮ್ಮಿಕೊಂಡು ಶ್ರಮಿಸುತ್ತಿದೆ. ಇದಕ್ಕೆ ಜಿಲ್ಲೆಯ ಸಾರ್ವಜನಿಕರು ಸಹಕಾರ ನೀಡಬೇಕೆಂದು ಗೌರವಾನ್ವಿತ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಶ್ರೇಣಿಯ ದಿವಾನಿ ನ್ಯಾಯಾಧೀಶರಾದ ಹೆಚ್.ಎ.ಸಾತ್ವಿಕ್ ಅವರು ಹೇಳಿದರು.

ಡಿಸೆಂಬರ್ 01ರಂದು ಸೋಮವಾರ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಡ್ಯಾಪ್ಕೋ, ಪೊಲೀಸ್ ಇಲಾಖೆ, ಯುವಜನ ಸಬಲೀಕರಣ ಇಲಾಖೆ, ಶಿಕ್ಷಣ ಇಲಾಖೆ, ರಿಮ್ಸ್, ರೋಟರಿ, ಲಯನ್ಸ್ ಕ್ಲಬ್, ಎನ್‌ವೈಕೆ, ನವೋದಯ ವೈದ್ಯಕೀಯ ಕಾಲೇಜು, ಎ.ಎಮ್.ಈ.ಎಸ್ ಡೆಂಟಲ್ ಕಾಲೇಜು, ಹೊಸ ಬೆಳಕು, ರೆಡ್ ರಿಬ್ಬನ್ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಆಶ್ರಯದಲ್ಲಿ ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಜನಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಹಸಿರು ಬಾವುಟ ತೋರಿ ಅವರು ಮಾತನಾಡಿದರು.

ಜಗತ್ತಿನ ಎಲ್ಲ ದೇಶಗಳು ಸೋಂಕಿನ ತಡೆಗೆ ಹಗಲಿರಳು ಶ್ರಮಿಸುತ್ತಿವೆ. ಇದಕ್ಕೆ ಭಾರತವು ಹೊರತಾಗಿಲ್ಲ. ಸೋಂಕಿತರನ್ನು ಕಳಂಕರನ್ನಾಗಿ ಮಾಡದೇ ಸಮಾಜಮುಖಿಯಾಗಿಸಲು ಮತ್ತು ಅವರನ್ನು ಎಲ್ಲರಂತೆ ಕಾಣಬೇಕಿದೆ.

ಜೊತೆ ಜೊತೆಗೆ ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಯುವ ಜನತೆಗೆ ಹೆಚ್ಚು ಸೋಂಕಿಗೆ ಒಳಗಾಗುತ್ತಿರುವ ಗಂಭೀರತೆಯನ್ನು ಸಮುದಾಯದ ಪ್ರತಿಯೊಬ್ಬರೂ ಸಹ ಅರ್ಥಮಾಡಿಕೊಂಡು ಇಂದಿನಿಂದಲೆ ಜಾಗೃತರಾಗಬೇಕು. ಸೋಂಕು ಮುಕ್ತ ರಾಯಚೂರು ಜಿಲ್ಲೆಯನ್ನಾಗಿಸಲು ಪ್ರತಿಯೊಬ್ಬರು ಶ್ರಮಿಸಬೇಕೆಂದರು.

ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಮಾತನಾಡಿ, ಆಧುನಿಕತೆಯ ಜಂಜಡಗಳ ಮಧ್ಯದಲ್ಲಿರುವ ಯುವಜನತೆಯು ತಮ್ಮ ತಂದೆ, ತಾಯಿ, ಗುರುಗಳ ಮಾರ್ಗದರ್ಶನ ಪಡೆಯುವ ಮೂಲಕ ತಮ್ಮ ತಮ್ಮ ತನ ಉಳಿಸಿಕೊಳ್ಳುವ ಮೂಲಕ ಹೆಚ್‌ಐವಿ ಸೋಂಕಿನ ಹೊಸ ಪ್ರಕರಣಗಳ ತಡೆಗೆ ಕೈಜೊಡಿಸಬೇಕಿದೆ ಎಂದರು.



ಪ್ರಸ್ತುತ ವರ್ಷ ಜಿಲ್ಲೆಯಲ್ಲಿ 55,275 ಜನರನ್ನು ಪರೀಕ್ಷಿಸಲಾಗಿ 236 ಜನರಿಗೆ ಸೊಂಕೀರುವುದು ಕಂಡುಬಂದಿದ್ದು, ಇದರಲ್ಲಿ ಯುವ ಸಮುದಾಯದ ಸಂಖ್ಯೆ ಹೆಚ್ಚಳವಾಗುತ್ತಿರುವುದು ಕಳವಳದ ಸಂಗತಿಯಾಗಿದೆ. ಒಮ್ಮೆ ಸೋಂಕಿಗೆ ಒಳಗಾದಲ್ಲಿ ಜೀವನಪೂರ್ತಿ ಜೊತೆಗೆ ಇರುವ ಹೆಚ್‌ಐವಿ ಏಡ್ಸಿಂದ ಯುವಜನತೆಯನ್ನು ಪಾರುಮಾಡಲು ಎಲ್ಲರೂ ಸೇರಿ ಪ್ರಯತ್ನಿಸೋಣ ಎಂದು ಮನವಿ ಮಾಡಿದರು.

ಎಚ್.ಐ.ವಿ ಮತ್ತು ಏಡ್ಸ್ ಕಾಯಿಲೆಯು ಕಳೆದ 40 ವರ್ಷಗಳಿಂದ ಮಾನವ ಜನಾಂಗವನ್ನು ಕಾಡುತ್ತಿದೆ. ಏಡ್ಸ್ ರೋಗವನ್ನು ಸಮಾಜದಿಂದ ಸಂಪೂರ್ಣವಾಗಿ ತೊಲಗಿಸಲು ಜಿಲ್ಲಾ ಮಟ್ಟದಿಂದ ತಾಲೂಕು ಹಾಗೂ ಗ್ರಾಮ ಮಟ್ಟದವರೆಗೆ ಏಡ್ಸ್ ನಿಯಂತ್ರಣ ಕಾರ್ಯಕ್ರಮಗಳನ್ನು ವಿಸ್ತರಿಸಲಾಗಿದೆ ಎಂದರು.

## ಮೊದಲನೇಯ ಪುಟದಿಂದ

# ನಾನು ಮತ್ತು ಸಿದ್ದರಾಮಯ್ಯ ಸೋದರರಿದ್ದಂತೆ : ಡಿ.ಕೆ.ಶಿ

ನಾವು ಅಧ್ಯಕ್ಷ ಸ್ಥಾನ ಅಧಿಕಾರ ಬಿಟ್ಟು ಹೋಗುವಾಗ, ಅಲ್ಲಿನ ಹೊಣೆಗಾರಿಕೆಗಳೆಲ್ಲವೂ ಎಲ್ಲವೂ ವರ್ಗಾವಣೆಯಾಗಿರುತ್ತದೆ ಎಂದರು.ಒಂದೆರಡು ಶೇರುಗಳು ನಮ ಹೆಸರುಗಳಲ್ಲಿ ಉಳಿದುಕೊಳ್ಳಬಹುದು. ಪಂಡಿತ್ ಜವಹಾರ್ ಲಾಲ್ ನೆಹರು ಅವರು ನ್ಯಾಷನಲ್ ಹೆರಾಲ್ ಪ್ರಕರಣದಲ್ಲಿ ಒಂದಷ್ಟು ಶೇರುಗಳನ್ನು ಉಳಿಸಿಕೊಂಡಿರಬಹುದು, ಅವು ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಸೋನಿಯಾ ಗಾಂಧಿಯ ಮೂಲಕ ವರ್ಗಾವಣೆಯಾಗಿ ಬಂದಿವೆ. ಎಲ್ಲವೂ ಪಾರದರ್ಶಕವಾಗಿದೆ ಎಂದರು.

ಯಂಗ್ ಇಂಡಿಯಾ ಮತ್ತು ನ್ಯಾಷನಲ್ ಹೆರಾಲ್ ಸಂಸ್ಥೆಗಳು ಕಾಂಗ್ರೆಸ್ ಪಕ್ಷದ ಸಂಸ್ಥೆಯ ಆಸ್ತಿ. ನ್ಯಾಷನಲ್ ಹೆರಾಲ್ಡ್? ಗಾಂಧಿ ಕುಟುಂಬದ ಆಸ್ತಿಯಲ್ಲ. ಗಾಂಧಿ ಕುಟುಂಬ ಇಲ್ಲದೆ ಕಾಂಗ್ರೆಸ್ ಪಕ್ಷ ಇಲ್ಲ. ಸೋನಿಯಾ ಗಾಂಧಿಯವರು ಪಕ್ಷದ ಅಧ್ಯಕ್ಷರಾಗಿದ್ದಾಗ ಶೇರುಗಳನ್ನು ಉಳಿಸಿಕೊಂಡಿರಬಹುದು. ಸೀತಾರಾಮ್ ಕೇಸರಿ ಅವರ ಬಳಿಕ ಸೋನಿಯಾ ಗಾಂಧಿಯವರು ಕಾಂಗ್ರೆಸ್? ಪಕ್ಷದ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡರು. ಅವರ ಮಾರ್ಗದರ್ಶನದಲ್ಲಿ ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು 10 ವರ್ಷ ಆಡಳಿತ ನಡೆಸಿದೆ ಎಂದರು

ಕಾಂಗ್ರೆಸ್ ಪಕ್ಷವನ್ನು ಬೆದರಿಸಲು ರಾಜಕೀಯ ಕಿರುಕುಳ ನೀಡಲಾಗುತ್ತಿದೆ. ಇದಕ್ಕೆ ರಾಹುಲ್ ಗಾಂಧಿ ಹೆದುರಿಕೊಳ್ಳುವುದಿಲ್ಲ. ಕೇಂದ್ರ ಸರ್ಕಾರ ಅಸೂಯೆಯಿಂದ ತೆಗೆದುಕೊಳ್ಳುತ್ತಿರುವ ಕ್ರಮಗಳು ನಗಣ್ಯ. ದೇಶದಲ್ಲಿ ಸಾಕಷ್ಟು ಸಮಸ್ಯೆಗಳಿವೆ ಅದನ್ನೆಲ್ಲ ಬಿಟ್ಟು ದ್ವೆ?ಷದ ರಾಜಕಾರಣ ಮಾಡುತ್ತಿರುವುದು ಖಂಡನೀಯ. ಇಂತಹ ಕ್ರಮಗಳಿಂದ ಕಾಂಗ್ರೆಸ್ ಪಕ್ಷವನ್ನು ಹತ್ತಿಕ್ಕುವುದು ಸುಲಭ ಅಲ್ಲ. ರಾಜಕಾರಣದಲ್ಲಿ ಮುಖಾಮುಖಿಯಾಗಿ ಚುನಾವಣೆಯಲ್ಲಿ ಎದುರಿಸಬೇಕು ಎಂದು ಹೇಳಿದರು.

**ಶೀಘ್ರವೇ ಸರ್ವ ಪಕ್ಷ ಸಭೆ:** ದೆಹಲಿಯಲ್ಲಿ ನಮ ರಾಜ್ಯದ ಸಂಸದರ ಜೊತೆಗೆ ಸರ್ವಪಕ್ಷ ಸಭೆ ಕರೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜೊತೆ ಚರ್ಚೆ ನಡೆಸಲಾಗುತ್ತಿದೆ ಎಂದು ಹೇಳಿದರು.ಉತ್ತರಪ್ರದೇಶದ ಸಂಸದ ರಾಜೀವ್ ರಾಯ್ ಬೆಂಗಳೂರಿನ ಸಂಚಾರ ದಟ್ಟಣೆಯ ಬಗ್ಗೆ ಟೀಕೆ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿದ ಡಿಕೆಶಿ, ಸದರಿ ಸಂಸದರನ್ನು ತಾವು ದೆಹಲಿಯಲ್ಲಿ ಭೇಟಿ ಮಾಡಲಿದ್ದು, ಚರ್ಚೆ ನಡೆಸುತ್ತೇನೆ ಎಂದರು.

ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರನ್ನು ಪುಣ್ಯಸರಣೆಯ ಕಾರಣಕ್ಕೆ ಸರಿಸಿಕೊಳ್ಳುತ್ತಿದ್ದೇವೆ. ವಿಧಾನಸೌಧವನ್ನು ಕೆಂಗಲ್ ಹನುಮಂತಯ್ಯ, ವಿಕಾಸಸೌಧವನ್ನು ಎಸ್.ಎಂ.ಕೃಷ್ಣ ನಿರ್ಮಿಸಿದರು. ಬೆಂಗಳೂರನ್ನು ಕೆಂಪೇಗೌಡರು ಕಟ್ಟಿದ್ದರು. ಅವರ ಎಲ್ಲಾ ಸಾಧನೆಗಳು ಇಂದು ನಮ ಮುಂದೆ ಸಾಕ್ಷಿ ಗುಡ್ಡೆಗಳಾಗಿ ನಿಂತಿವೆ. ಯಾರಿಗೆ ಆಗಲಿ ಅಧಿಕಾರ ಸಿಕ್ಕಾಗ ಸಾಕ್ಷಿ ಗುಡ್ಡೆಗಳನ್ನು ಬಿಟ್ಟು ಹೋಗಬೇಕು ಎಂದು ಹೇಳಿದರು.

ಆ ಕಾಲದಲ್ಲಿ ಕರ್ನಾಟಕದ ರಾಜಧಾನಿ ರಾಜ್ಯದ ಮಧ್ಯ ಭಾಗ ದಾವಣಗೆರೆಗೆ ಹೋಗಿದ್ದರೆ, ಬೆಂಗಳೂರು ಇಷ್ಟು ದೊಡ್ಡದಾಗಿ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಬೆಂಗಳೂರು ಹವಾಗುಣ ಆಹ್ಲಾದಕರವಾಗಿದೆ. ವಿಶ್ವದ ಜನರೇ ಇತ್ತ ಆಕರ್ಷಿತರಾಗುತ್ತಿದ್ದಾರೆ ಎಂದರು.

ಸಮುದ್ರ ದಂಡೆಯಲ್ಲಿರುವ ನಗರಗಳಿಗೆ ಆಗುತ್ತಿರುವ ಸಮಸ್ಯೆ ಬಗ್ಗೆಯೂ ಎಲ್ಲರಿಗೂ ಗೊತ್ತಿದೆ. ಬೆಂಗಳೂರು ಹವಾಮಾನ ವೈಪರಿತ್ಯ ಸೇರಿದಂತೆ ಎಲ್ಲಾ ರೀತಿಯಲ್ಲೂ ಸುರಕ್ಷಿತವಾದ

# ಏಡ್ಸ್ ಕಾಯಿಲೆ ನಿರ್ಮೂಲನೆಗೆ ಸಾರ್ವಜನಿಕರು ಸಹಕರಿಸಬೇಕು: ನ್ಯಾ.ಹೆಚ್.ಎ.ಸಾತ್ವಿಕ್

ಏಡ್ಸ್ ಕುರಿತು ವ್ಯಾಪಕ ಪ್ರಚಾರ: ಏಡ್ಸ್ ಕುರಿತು ಜನಜಾಗೃತಿಗಾಗಿ ಆರೋಗ್ಯ ಇಲಾಖೆಯ ಐಇಸಿ ಕಾರ್ಯಕ್ರಮಗಳ ಮೂಲಕ ಜಿಲ್ಲೆಯ ಎಲ್ಲ ತಾಲೂಕು, ಗ್ರಾಮಗಳಲ್ಲಿ ಜಾನಪದ ಕಲಾ ತಂಡಗಳ ಮೂಲಕ ಅರಿವು ಮೂಡಿಸಿ ಮನೆಮನೆಗೆ ಮಾಹಿತಿ ತಲುಪಿಸಲಾಗುತ್ತಿದೆ. ಕರಪತ್ರ, ಪೋಸ್ಟರ್, ಬಿತ್ತಿಪತ್ರ ಮತ್ತು ಮಾಧ್ಯಮಗಳ ಮೂಲಕ ಏಡ್ಸ್ ಕುರಿತು ವ್ಯಾಪಕ ಪ್ರಚಾರ ಮಾಡಲಾಗುತ್ತಿದೆ. ಯುವ ಸಮೂಹ ಕೇಂದ್ರಿಕರಿಸಿ, ವಿವಿಧ ರೀತಿಯ ಅರಿವು ಕಾರ್ಯಕ್ರಮಗಳನ್ನು ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಸಾಧಕರಿಗೆ ಸನ್ಮಾನ: ರಾಜ್ಯ ಮಟ್ಟದಲ್ಲಿ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಮೊದಲ ಸ್ಥಾನ ಪಡೆದ ರಾಯಚೂರು ತಾಲೂಕಿನ ಸಗಮಕುಂಟಾ ಸರಕಾರಿ ಪ್ರೌಢಶಾಲಾ ವಿಧ್ಯಾರ್ಥಿಗಳು, ಮುಖ್ಯ ಶಿಕ್ಷಕರು ಹಾಗೂ ಸೋಂಕಿತ ಗರ್ಭಿಣಿಯರ ಹೆರಿಗೆ ಮಾಡಿದ ರಿಮ್ಸ್ ಪ್ರಸೂತಿ ತಜ್ಞರು, ಹೆಚ್ಚು ಪರೀಕ್ಷೆ ಕೈಗೊಂಡ ಜಹೀರಾಬಾದ್ ನಗರ ಆರೋಗ್ಯ ಕೇಂದ್ರ ವೈದ್ಯಾಧಿಕಾರಿಯವರಿಗೆ ವಿವಿಧ ಗಣ್ಯರಿಂದ ಸನ್ಮಾನಿಸಲಾಯಿತು.

ನಗರದ ಪ್ರಮುಖ ಬೀದಿಗಳಲ್ಲಿ ಜಾಥಾ: ಏಡ್ಸ್ ಕುರಿತು ಜನಜಾಗೃತಿ ಜಾಥಾನಡಿಗೆಯು ಡಿಎಚ್‌ಓ ಕಚೇರಿಯಿಂದ ಆರಂಭಗೊಂಡು, ಮಹಾವೀರ್ ಸರ್ಕಲ್, ಭಗತ್ ಸಿಂಗ್ ಸರ್ಕಲ್ ಮೂಲಕ ಡಿಎಚ್‌ಓ ಕಚೇರಿಗೆ ತಲುಪಿತು. ಜಾಥಾದಲ್ಲಿ ಸುಮಾರು 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ವಿಜಯಶಂಕರ್, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದಿತಾ ಎಂ.ಎನ್. ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಗಣೇಶ ಕೆ, ರಿಮ್ಸ್ ಪ್ರಸೂತಿ ತಜ್ಞೆ.ಡಾ.ಇಸ್ರತ್ ಸಿದ್ದಿಕಿ, ಎಎಮ್‌ಇಎಸ್ ದಂತ ಕಾಲೇಜಿನ ಡಾ.ಸೋಮನಾಥ, ಡಾ.ಅರುಣಾ, ಮಾನಸಿಕ ತಜ್ಞರಾದ ಮನೋಹರ ಪತ್ತಾರ, ರಿಮ್ಸ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಶ್ರೀಶೈಲ್ ಶಂಕರ ರೆಡ್ಡಿ, ಸರಕಾರಿ ಮಹಿಳಾ ಕಾಲೇಜು ಪ್ರಾಂಶುಪಾಲರಾದ ಡಾ.ಸುಗುಣಾ, ರೆಡ್ ಕ್ರಾಸ್ ಕಾರ್ಯದರ್ಶಿ ಅತ್ತಾವುಲ್ಲಾ, ಜಿಲ್ಲಾ ಸಂಚಾಲಕರು ಡಾ.ದಂಡಪ್ಪ ಬಿರಾದಾರ, ಡಿಹೆಚ್‌ಇಓ ಈಶ್ವರ ದಾಸಪ್ಪನವರ, ಡ್ಯಾಪ್ಕೋ ಜಿಲ್ಲಾ ಮೇಲ್ವಿಚಾರಕ ಮಲ್ಲಯ್ಯ ಮಠಪತಿ, ಡಿವೈಹೆಚ್‌ಇಓ ಬಸಯ್ಯ, ಅರ್ಚನಾ, ಸಂತೋಷ ಕುಮಾರ್ ಸೇರಿದಂತೆ ಡ್ಯಾಪ್ಕೋ, ಟಿಬಿ ಸಿಬ್ಬಂದಿ ಹಾಗೂ ಕಾಲೇಜು ವಿದ್ಯಾರ್ಥಿಗಳು ಇದ್ದರು.

ಡಿಸೆಂಬರ್ 07ರಂದು ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ

ರಾಯಚೂರು ಡಿಸೆಂಬರ್ 01 (ಕರ್ನಾಟಕ ವಾರ್ತೆ): ಪ್ರತಿ ವರ್ಷದಂತೆ ಈ ವರ್ಷವು ಸಹ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯನ್ನು ಕಲಬುರಗಿಯ ಸೈನಿಕ ಕಲ್ಯಾಣ ಮತ್ತು ಪುರ್ನವಸತಿ ಇಲಾಖೆಯ ಉಪ ನಿರ್ದೇಶಕರ ಕಚೇರಿಯಲ್ಲಿ ಡಿಸೆಂಬರ್ 07ರ ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮಕ್ಕೆ ಯಾದಗಿರಿ, ಬೀದರ, ರಾಯಚೂರು ಹಾಗೂ ಕಲಬುರಗಿ ಜಿಲ್ಲೆಯ ಮಾಜಿ ಸೈನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08472–225003ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುರ್ನವಸತಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದತ್ತಿಗಳು ಕನ್ನಡ ಸಾಹಿತ್ಯ ಪರಿಷತ್ತನ್ನು ಪೋಷಿಸಿವೆ : ಕೆ.ಕರಿಯಪ್ಪ

ಕೆ ಕರಿಯಪ್ಪ ಬಿಜೆಪಿ ಮುಖಂಡರು ಅವರನ್ನು ಎಲ್ ಬಿ ಕೆ ಮತ್ತು ನೋಬೆಲ್ ಪದವಿ ಮಹಾವಿದ್ಯಾಲಯದ ಪರವಾಗಿ ಸನ್ಮಾನಿಸಿ ಅಭಿನಂದಿಸಲಾಯಿತು.

ಈ ಕಾರ್ಯಕ್ರಮದ ಘನ ಅಕ್ಷತೆಯನ್ನು ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರಾದ ಹೆಚ್ ಎಫ್ ಮಸ್ಕಿ ಅವರು ವಹಿಸಿಕೊಂಡು ಮಾತನಾಡುತ್ತಾ, ಕನ್ನಡ ನಾಡು ,,ನುಡಿ ಜಲ ,ವಿಷಯಗಳ ಬಂದಾಗ ನಮ್ಮ ಸ್ವಾಭಿಮಾನದಿಂದ ಕನ್ನಡವನ್ನು ಕಟ್ಟಿ ಬೆಳೆಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಈ ಭಾಗವಾಗಿ ಪರಿಷತ್ತು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳೋದರ ಮೂಲಕ ಯಶಸ್ಸಿನ ಕಡೆಗೆ ಹೋಗುತ್ತೇವೆ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸುತ್ತಾ ಇದಕ್ಕೆ ತಮ್ಮೆಲ್ಲರ ಸಹಕಾರ ಅಗತ್ಯ ಎಂದರು ಈ ಕಾರ್ಯಕ್ರಮದ ವೇದಿಕೆಯಲ್ಲಿ ಶ್ರೀ ಅಂಬರೀಶಪ್ಪ ಮೈಲಾರ ಶರಣಪ್ಪ ಬರ್ಸಿ ದೇವಿರಮ್ಮ ಹಾಗೂ ಅಂಬರೀಶ್ ಅಲಬನೂರ್ ವರದಿಗಾರರು ವೇದಿಕೆ ಮೇಲಿದ್ದರು ಪರಿಷತ್ತಿನ ಸದಸ್ಯರಾದ ದುರ್ಗಪ್ಪ ಗುಡೂರು ಪ್ರಸ್ತಾವಿಕವಾಗಿ ಮಾತನಾಡಿದರು ನೊಬೆಲ್ ಪದವಿ ಮಹಾ ವಿದ್ಯಾಲಯದ ಕಾರ್ಯದರ್ಶಿಗಳಾದ ಡಾ. ಅರುಣ್ ಕುಮಾರ್ ಬೆರ್ಗಿ ಉದ್ಘಾಟಿಸಿ ಮಾತನಾಡಿದರು ಉಪನ್ಯಾಸಕಿ ಅಶ್ವಿನಿ ಪ್ರಾರ್ಥಿಸಿದರು ಸುರೇಶ್ ಮುಳ್ಳೂರ್ ಸ್ವಾಗತಿಸಿದರು ನಂದಿನಿ ಗೂಗಿ ನಿರೂಪಿಸಿದ್ರು ಕೃಷ್ಣ ರಾಠೋಡ್ ವಂದಿಸಿದರು

**ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ**

**9743497111,9743496111**

# ಗೋರ್ಕಲ್ ದೇಶಾಭಿಮಾನಿಗಳ ಬಳಗದಿಂದ ಅಗ್ನಿವೀರ ರಿಗೆ ಸನ್ಮಾನ



ಯುವಮಾರ್ಗ ಸುದ್ದಿ

**ಮಾನ್ವಿ,ಡಿ.1–** ನನ್ನ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಇಂದು ದೇಶ ಸೇವೆಗೆ ಹೋಗುತ್ತಿರುವುದು ನಮ್ಮ ಗ್ರಾಮೀಣ ಪ್ರದೇಶಗಳ ಶಿಕ್ಷಕರ ಘನತೆ ಹೆಚ್ಚಿಸಿದೆ ಎಂದು ಗೋರ್ಕಲ್ ಶಾಲೆಯ ಮುಖ್ಯೋಪಾಧ್ಯಾಯರಾದ ರಮೇಶ್ ಪ್ರಾಸ್ತಾವಿಕ ನುಡಿಯಲ್ಲಿ ಅಗ್ನಿವೀರ್ ಸೇನೆಗೆ ಸೇರ್ಪಡೆಯಾದ ಯುವಕರನ್ನು ಕೊಂಡಾಡಿ ಹಾರೈಸಿದರು.

ಮಾನ್ವಿ ತಾಲೂಕಿನ ಗೋರ್ಕಲ್ ಗ್ರಾಮದಲ್ಲಿ ನಡೆದ ಅಗ್ನಿವೀರರಿಗೆ ಹಾಗೂ ಮಾಜಿ ಯೋಧರಿಗೆ ಸನ್ಮಾನ ಕಾರ್ಯಕ್ರಮ ಗೋರ್ಕಲ್ ಗ್ರಾಮದ ಹಿರಿಯ ಮುಖಂಡರು ದೇಶಾಭಿಮಾನಿಗಳ ಬಳಗ ಹಾಗೂ ಹಳೆಯ ವಿದ್ಯಾರ್ಥಿಗಳ ಸಂಯುಕ್ತಾಶ್ರಯದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸನ್ಮಾನ ಕಾರ್ಯಕ್ರಮ ಬಹಳ ಅದ್ದೂರಿಯಾಗಿ ನಡೆಯಿತು ಇಲ್ಲಿಯವರೆಗೆ ಈ ಯುವಕರು ನಮ್ಮ ಗ್ರಾಮಗಳ ಮಕ್ಕಳಾಗಿದ್ದರು ಇಂದಿನಿಂದ ಇವರು ಭಾರತಾಂಬೆಯ ಮಕ್ಕಳು ನಾವು ಹಾಕಿದ ಮರದ ಹಣ್ಣನ್ನು ನಾವೇ ತಿನ್ನಬೇಕು ಈ ಯುವಕರ ದೇಶಾಭಿಮಾನವನ್ನು ಮುಂದಿನ ಯುವ ಪೀಳಿಗೆ ಅನುಸರಿಸಬೇಕೆಂದು ಆಂಜನೇಯ ನಸಲಾಪುರ ಯುವಕರಿಗೆ ಕರೆ ಕೊಟ್ಟರು ನಂತರ ಜಿಲ್ಲಾಧ್ಯಕ್ಷರಾದ ಕೃಷ್ಣಮೂರ್ತಿ ರವರು ಮಾತನಾಡಿ ಗ್ರಾಮೀಣ ಪ್ರದೇಶದ ಯುವಕರು ತಮ್ಮ ಶರೀರವನ್ನು ಉತ್ತಮ ರೀತಿಯಲ್ಲಿ ಇಟ್ಟುಕೊಂಡು ಸೇನೆಗೆ ಭರ್ತಿಯಾಗಿರುವುದು ಅವರವರ ಗ್ರಾಮಗಳ ಸರಕಾರಿ ಶಾಲೆಗಳ ಘನತೆ ಹೆಚ್ಚಿಸಿದೆ. ಅಗ್ನಿ ವೀರರು ತರಬೇತಿ ಸಮಯದಲ್ಲಿ ಶರೀರ ಮತ್ತು ಆರೋಗ್ಯವನ್ನು ಹತೋಟಿಯಲ್ಲಿಟ್ಟುಕೊಂಡು ಆಹಾರದ ಜೊತೆಗೆ ಉತ್ತಮವಾದ ಪ್ರೋಟೀನ್ ಗಳನ್ನು ಸೇವಿಸಿ ದೇಹವನ್ನು ಸದೃಢ ಮಾಡಿಕೊಡಳ್ಳಬೇಕೆಂದು ಜಲ್ಲಿ ಹನುಮಂತಪ್ಪ ನೀರಮಾನ್ವಿ ಕಿವಿ ಮಾತು ಹೇಳಿದರು ಕಷ್ಟಕರವಾದ ಭಾರತಮಾತೆಯ ಸೇವೆಗೆ ನಿಯುಕ್ತಿಯಾಗುವುದು ಗ್ರಾಮೀಣ ಪ್ರದೇಶದ ರೈತರ ಮಕ್ಕಳು ಹಾಗೂ ಬಡವರ ಮಕ್ಕಳು ಮಾತ್ರ ಹಿರಿಯ ಅಧಿಕಾರಿಗಳ ಶ್ರೀಮಂತ ರಾಜಕೀಯ ಮುಖಂಡರ ದೊಡ್ಡ ಉದ್ಯಮಿಗಳ ಮಕ್ಕಳು ಎಂದು ಸೇನೆಗೆ ಸೇರುವುದಿಲ್ಲ ನಮ್ಮ ಗ್ರಾಮೀಣ ಪ್ರದೇಶದ ಯುವಕರು ಮಾತ್ರ ದೇಶ ರಕ್ಷಣೆ ಮಾಡುತ್ತಿದ್ದಾರೆಂದು ಜೆಲ್ಲಿ ಆಂಜನೇಯ ನೀರಮಾನ್ವಿ ಹೇಳಿದರು. ಅಧ್ಯಕ್ಷೀಯ ನುಡಿಯಲ್ಲಿ ಬಸವರಾಜ್ ಮುಸ್ಟೂರ್ ತಾಲೂಕ ಅಧ್ಯಕ್ಷರು ನಾನು ಕೂಡ ಸೇನೆಗೆ ಭರ್ತಿಯಾದಾಗ ನಮ್ಮ ಮನೆಯಲ್ಲಿ ನಮ್ಮ ಅಜ್ಜಿ ನೀನು ಹೋಗಬೇಡ ನಿನಗೆ ಜಮೀನು ಬಹಳಷ್ಟು ಇದೆ ಯಾಕೆ ಹೋಗುತ್ತೀಯಾ ಎಂದರು ಕೂಡ ನಾನು ನಮ್ಮ ಅಜ್ಜಿಯ ಮಾತನ್ನು ಧಿಕ್ಕರಿಸಿ ಸೇನೆಗೆ ಸೇರಿ ಭಾರತ ದೇಶದ ಮೂಲೆ ಮೂಲೆಯಲ್ಲಿ ಸೇವೆ ಮಾಡಿ ನಿವೃತ್ತಿಯಾಗಿ ಸುಖವಾಗಿ ಇದ್ದೇನೆಂದರು

ನಂತರ ಅಗ್ನಿವೀರ್ ಸೇನೆಗೆ ನೇಮಕವಾದ ವೀರಭದ್ರ ಸಾದಾಪುರ ಮತ್ತು ಉಪ್ಪಳಪ್ಪ ಕರಾಬದಿನ್ನಿ ತಮ್ಮ ಅನಿಸಿಕೆ ಹಂಚಿಕೊಂಡರು ಹಾಗೆ ತಾಲೂಕಿನ ಅಗ್ನಿವೀರ್ ಗೆ ನಿಯುಕ್ತಿಗೊಂಡ ಸಾದಾಪುರ ಗ್ರಾಮದ ಮಹೇಶ್ ನಾಯಕ ವೀರಭದ್ರ ಕಪಗಲ್ ಗ್ರಾಮದ ವೀರೇಶ್ ಹರವಿ ಗ್ರಾಮದ ನಾಗರಾಜ ನಾಯಕ ಕುರುಡಿ ಗ್ರಾಮದ ತಾಯಣ್ಣ ಭೋವಿ ಗೋರ್ಕಲ್ ವಿಜಯ್ ಕುಮಾರ್ ಬೆಟ್ಟದೂರು ಗ್ರಾಮದ ಮಹೇಶ್ ನಾಯಕ ಕರಾಬ್ ದಿನ್ನಿ ಗ್ರಾಮದ ಉಪ್ಪಳಪ್ಪ ಹಾಗೂ ಮಾಜಿ ಸೈನಿಕರನ್ನು ದೇಶಾಭಿಮಾನಿ ಬಳಗ ಗೋರ್ಕಲ್ ಸನ್ಮಾನಿಸಿದರು

ಈ ಕಾರ್ಯಕ್ರಮವನ್ನು ಗೋರ್ಕಲ್ ಗ್ರಾಮದ ದೇಶಾಭಿಮಾನಿ ಬಳಗ ಹಾಗೂ ರಮೇಶ್ ಸಾಣಿ ಡಾ. ವಿಶ್ವನಾಥ್ ವಿರೂಪಾಕ್ಷ ರೆಡ್ಡಿ ಮಂದಕಲ್ ಬಸವರಾಜ ಗಟ್ಟು ಅಮರೇಗೌಡ ದಳಪತಿ ಜಂಬಣ್ಣ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ರಮೇಶ್ ಗೋರ್ಕಲ್ ಇನ್ನೂ ಹಲವಾರು ಹಿರಿಯ ಮುಖಂಡರು ಹಾಜರಿದ್ದು ಸನ್ಮಾನ ಕಾರ್ಯಕ್ರಮ ಯಶಸ್ವಿಗೊಳಿಸಿದರು ಕಾರ್ಯಕ್ರಮವನ್ನು ಹಚ್ಚು ಕಟ್ಟಾಗಿ ವಂದೇ ಮಾತರಂ ಯುವಕ ಸಂಘದ ಅಧ್ಯಕ್ಷರಾದ ಡಾಕ್ಟರ್ ಮಹಿಬೂಬ್ ಮದ್ಲಾಪುರ್ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳ ಪದಾಧಿಕಾರಿಗಳಾದ ಅಂಬಣ್ಣ ನಾಯಕ ಉಮಳಿಹೊಸೂರ್ ಯಶಸ್ವಿಗೊಳಿಸಿದರು. ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ವಿಶ್ವವಿದ್ಯಾನಿಲಯ ತಂಡಕ್ಕೆ ಆಯ್ಕೆ





**ಲಿಂಗಸುಗೂರು,ಡಿ.1–** ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಬಿ.ಎಸ್ಸಿಐದನೇ ಸೆಮಿಸ್ಟರ್ ನ ಕಮಾರಿ ರಕ್ಷಿತಾ ಹಾಗೂ ಸ್ನೇಹ ಮಹಿಳೆಯರ ಟೇಬಲ್ ಟೆನ್ನಿಸ್ ಪಂದ್ಯಾವಳಿಗೆ ರಾಯಚೂರಿನ ಆದಿಕವಿ ಶ್ರೀ ಮಹರ್ಷಿ ವಿಶ್ವವಿದ್ಯಾನಿಲಯ ತಂಡಕ್ಕೆ ಆಯ್ಕೆಯಾಗಿದ್ದಾರೆ. ಡಿ 7 ರಿಂದ ಆಂದ್ರಪ್ರದೇಶದ ವಿಶಾಖಪಟ್ಟಣಂ ನ ಗೀತಂ ವಿಶ್ವವಿದ್ಯಾನಿಲಯದಲ್ಲಿ ನಡೆಯುವ ದಕ್ಷಿಣ ಭಾರತ ಅಂತರ್ ವಿಶ್ವವಿದ್ಯಾನಿಲಯಗಳ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ. ಕ್ರೀಡಾ ವಿಭಾಗದ ಸಂಯೋಜಕರಾದ

# ಎಚ್‌ಐವಿ ಹಾಗೂ ಏಡ್ಸ್ ವಿರುದ್ಧ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಅವಶ್ಯವಿದೆ ; ಡಾ.ಉಮೇಮಾ ಅಮೇರಾ




ಯುವಮಾರ್ಗ ಸುದ್ದಿ

**ಸಿಂಧನೂರು,ಡಿ.1–** ಜಿಲ್ಲಾಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.ಜಿಲ್ಲಾ ಏಡ್ಸ್ ನಿಯಂತ್ರಣ ಸೊಸೈಟಿ ರಾಯಚೂರು ಸರ್ಕಾರಿ ಪದವಿ ಪೂರ್ವ ಕಾಲೇಜ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಇವರ ಸಂಯುಕ್ತ ಆಶ್ರಯದಲ್ಲಿ ಜವಳಗೇರಾ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ವೈದ್ಯಾಧಿಕಾರಿಗಳಾದ ಉಮೇಮಾ ಅಮೇರಾ ಅವರು ಉದ್ಘಾಟನೆ ಮಾಡಿ ಮಾತನಾಡಿದರು ಎಚ್‌ಐವಿ ಮತ್ತು ಏಡ್ಸ್ ನಾಲ್ಕು ವಿಧಾನಗಳು ಮೂಲಕ ಮನುಷ್ಯನ ದೇಹವನ್ನು ಸೇರುತ್ತದೆ. ಎಚ್‌ಐವಿ ಪೀಡಿತ ತಾಯಿ ಯಿಂದ ಮಗುವಿಗೆ ಆ ಸುರಕ್ಷತಾ ರಕ್ತವನ್ನು ಪಡೆಯುವುದರಿಂದ ಅಸುರಕ್ಷಿತ ಲೈಂಗಿಕತೆಯಿಂದ ಅ ಸುರಕ್ಷಿತ ಸೂಜಿ ಮತ್ತು ಸಿರಂಜಿ ಬಳಸುವುದರಿಂದ ಬರುವ ಸಾಧ್ಯತೆ ಹೆಚ್ಚಿರುತ್ತದೆ .ಸೋಂಕು ಪೀಡಿತ ವ್ಯಕ್ತಿಯೊಂದಿಗೆ ಮಾತನಾಡುವುದು, ಜೊತೆ ಕೂತು ಊಟ ಮಾಡುವುದು, ಅವರೊಂದಿಗೆ ಬಟ್ಟೆ, ಹೊದಿಕೆಗಳನ್ನು ಹಂಚಿಕೊಳ್ಳುವುದರಿಂದ ಏಡ್ಸ್ ಬರುವುದಿಲ್ಲ. ಹಾಗಾಗಿ ಏಚ್ ಐ ವಿ ಏಡ್ಸ್ ಬಗ್ಗೆ ನೀವು ಅರಿಯಿರಿ, ನಿಮ್ಮ ನೆರೆಹೊರೆಯವರಿಗೂ ಜಾಗೃತಿ ಮೂಡಿಸಿ. ಸೋಂಕಿತ ವ್ಯಕ್ತಿಯನ್ನು ಗೌರವದಿಂದ ನೆಡೆಸಿಕೊಳ್ಳಬೇಕು. ಎಂದರು.

ನಂತರ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು ಮಾತನಾಡಿದರು, ಎಚ್‌ಐವಿ ಒಂದು ಹ್ಯೂಮನ್ ಇಮ್ಯೂನ್ ವೈರಸ್ ಹೆಚ್ಚಾಗಿ ಅಸುರಕ್ಷಿತ ಲೈಂಗಿಕತೆಯಿಂದ ಹರಡುತ್ತದೆ ಇದು ಮನುಷ್ಯನ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಕುಂದಿಸುತ್ತಾ ಹೋಗುತ್ತದೆ ನಂತರದಲ್ಲಿ ಏಡ್ಸ್ ಎಂದು ಸ್ವಾಧೀನ ಪಡಿಸಿಕೊಂಡ ಇಮ್ಯೂನ್ ಡಿಫಿಷಿಯನ್ಸಿ ಸಿಂಡ್ರೋಮ್ ಆಗಿ ಪರಿವರ್ತನೆಯಾಗಿ ಅವಕಾಶವಾದಿ ಸೋಂಕುಗಳಿಗೆ ದಾರಿ ಮಾಡಿಕೊಡುತ್ತದೆ ಇದರಿಂದ ಮನುಷ್ಯನ ದೇಹ ಹೊಂದಿಸುತ್ತಾ ಹೋಗುತ್ತದೆ ಅದಕ್ಕಾಗಿ ತಾಲೂಕ ಆಸ್ಪತ್ರೆಯ ಎ. ಆರ್. ಟಿ. ಕೇಂದ್ರದಲ್ಲಿ. ಆಪ್ತ ಸಮಾಲೋಚನೆ ನೆಡೆಸಿ ಮತ್ತು ದೇಹದ ಶಕ್ತಿಯನ್ನು ಹೆಚ್ಚಿಸುವಂತಹ ಚಿಕಿತ್ಸೆಯನ್ನು ನೀಡಲಾಗುತ್ತದೆ ಎ ಆರ್ ಟಿ ಚಿಕಿತ್ಸೆಯನ್ನು ನೀಡಲಾಗುತ್ತದೆ, ಅದಕ್ಕಾಗಿ ಎಚ್‌ಐವಿ ಮತ್ತು ಏಡ್ಸ್ ರೋಗಿಗಳಿಗೆ ಮಾನಸಿಕ ಧೈರ್ಯವನ್ನು ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಪದವಿ ಪೂರ್ವ ಕಾಲೇಜಿನ ಹಿರಿಯ ಉಪನ್ಯಾಸಕರಾದ ಶಂಕರಪ್ಪ , ಸಾಬಣ್ಣ , ಶಾಹೀನ್ ಶಿಲ್ಪಾ ಮತ್ತು ಆರೋಗ್ಯ ನಿರೀಕ್ಷಣಾ ಅಧಿಕಾರಿಗಳಾದ ಮಹೇಶ ಮತ್ತು ಅಂಬಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಬದುಕನ್ನು ರೂಪಿಸಿದ ದಿಕ್ಸೂಚಿಗಳ ಕುರಿತು ಇರಲಿ.... ಕೃತಜ್ಞತಾ ಭಾವ

**1957** ರ ಅಕ್ಟೋಬರ್ ರಲ್ಲಿ ತನ್ನ 43ನೇ ವಯಸ್ಸಿನಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತಗೊಂಡ ಆ ವ್ಯಕ್ತಿ ತನ್ನ ಸಂತಸವನ್ನು ತನ್ನ ಕುಟುಂಬ ಮತ್ತು ತನ್ನ ಬೆಂಬಲಿಗರೊಂದಿಗೆ ಹಂಚಿಕೊಳ್ಳುವುದಕ್ಕಿಂತ ಮುನ್ನ ತನಗೆ ಪಾಠ ಕಲಿಸಿದ ಶಾಲೆಯ ಗುರುಗಳಿಗೆ ಪತ್ರ ಬರೆದು ಹಂಚಿಕೊಂಡ. ಆತನಿಗೆ ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿ ದೊರಕಿದ್ದು ಹಾಗೆ ನೊಬೆಲ್ ಪ್ರಶಸ್ತಿ ಪುರಸ್ಕೃತ ವ್ಯಕ್ತಿಗಳಲ್ಲಿ ಅತ್ಯಂತ ಕಿರಿಯ ವಯಸ್ಸಿನ ವ್ಯಕ್ತಿ ಆತನಾಗಿದ್ದ. ತನ್ನ ವಾರಿಗೆಯ ಜನರ ಆತ್ಮವೇ ಆತ ಎಂದು ವಿಮರ್ಶಕರು ಆತನನ್ನು ಬಣ್ಣಿಸಿದ್ದರು. ಬಡತನದ ದವಡೆಯಲ್ಲಿ ಸಿಲುಕಿ ಓದಲು ಸಾಧ್ಯವಾಗದೆ ಇದ್ದ ತನ್ನನ್ನು ಓದಿಸಿ ಬರೆಸಿ ವಿದ್ಯಾವಂತನನ್ನಾಗಿಸಿದ ಗುರುವಿಗೆ ತಾನೆಂದಿಗೂ ಕೃತಜ್ಞ ಎಂದು ಆತ ಪತ್ರದಲ್ಲಿ ಬರೆದಿದ್ದ.

ತನಗೆ ನೊಬೆಲ್ ಪ್ರಶಸ್ತಿಯನ್ನು ಕೊಡ ಮಾಡುವ ಸಂಸ್ಥೆಯಿಂದ ಬಂದ, ಐತಿಹಾಸಿಕವಾಗಿ ತನ್ನ ಹೆಸರನ್ನು ಉಳಿಸುವ ಆ ಪತ್ರವನ್ನು ಓದಿ ಅದನ್ನು ಮಡಚಿಟ್ಟ ಆತ ತನ್ನ ಗುರುಗಳಿಗೆ ಪತ್ರ ಬರೆಯಲು ಆರಂಭಿಸಿದ.

ಆತನಿಗೆ ಟೆಲಿಗ್ರಾಂ ಬಂದು ಕೆಲ ನಿಮಿಷಗಳು ಕಳೆದಿರಬಹುದು. ಆತನ ಮನೆಯ ಬಾಗಿಲಿಗೆ ನೂರಾರು ಪತ್ರಕರ್ತರು ಹಾಜರಾದರು. ಪತ್ರಿಕೆಯ ಪ್ರಕಾಶಕರು, ಅಭಿಮಾನಿಗಳು, ಸಂದರ್ಶಕರು ಆತನ ಮನೆಯ ಮುಂದೆ ನೆರೆಯಲಾರಂಭಿಸಿದರು. ಟೆಲಿಫೋನಿನ ಗಂಟೆ ಮೊಳಗುವುದು ನಿಲ್ಲಲಿಲ್ಲ..... ಆದರೆ ಇದೆಲ್ಲಕ್ಕೂ ಮುನ್ನ ತನಗೆ ಬಂದ ಯಶಸ್ಸು, ಸಾಧಿಸಿದ ವಿಜಯ ಹಾಗೂ ಅದರ ಹಿಂದೆ ತಾನು ಮೈಗೂಡಿಸಿಕೊಂಡಿರುವ ತತ್ವಶಾಸ್ತ್ರದ ಕುರಿತು ಆತ ಯೋಚಿಸಲಿಲ್ಲ.

ಪ್ರಶಸ್ತಿಯ ಕುರಿತಾದ ಪತ್ರವನ್ನು ಓದಿ ಜೇಬಿನಲ್ಲಿಟ್ಟುಕೊಂಡ ಆತನ ನೆನಪಿಗೆ ಮೊದಲು ಬಂದದ್ದು ಆತನ ತಾಯಿ ನಂತರ ಆತನ ಮನಸ್ಸು ಆತನ ಬಾಲ್ಯದ ದಿನಗಳತ್ತ ತೆರಳಿ ಅಲ್ಜೀರಿಯಾದ ಶಾಲೆಯೊಂದರಲ್ಲಿ ತಾನು ಓದುತ್ತಿದ್ದ ತರಗತಿಯ ಖಾಲಿ ಕೋಣೆಯಲ್ಲಿ ಪುಟ್ಟ ಬಾಲಕನಾಗಿ ಬಡತನವನ್ನೇ ಹಾಸಿ ಹೊದ್ದ ತನ್ನ ಕಣ್ಣುಗಳಲ್ಲಿ ದಿಟ್ಟಿಸಿ ನೋಡಿ ತನಗೆ ಭವ್ಯವಾದ ಭವಿಷ್ಯವಿದೆ ಎಂದು ಯೋಚಿಸಿದ ಶಿಕ್ಷಕರನ್ನು ನೆನೆದ.

ಕೂಡಲೇ ಆಲ್ಬರ್ಟ್ ಕೇಮಸ್ ತನ್ನ ಬರೆಯುವ ಮೇಜಿನ ಬಳಿ ಬಂದು ಕುಳಿತು ಎಲಿಮೆಂಟರಿ ಶಾಲೆಯಲ್ಲಿ ತನಗೆ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದ ಲೂಯಿಸ್ ಜರ್ಮನ್ ಎಂಬ ಶಿಕ್ಷಕರಿಗೆ ಪತ್ರ ಬರೆಯಲು ಆರಂಭಿಸಿದ. ಇಷ್ಟೆಲ್ಲಾ ಸಂಭ್ರಮವನ್ನು ಅನುಭವಿಸುವುದನ್ನು ಬಿಟ್ಟು ಅಲ್ಬರ್ಟ್ ಪತ್ರ ಬರೆಯಲು ಆರಂಭಿಸಿದನೇ ಎಂದು ಅಚ್ಚರಿ ಪಡಬೇಕಾಗಿಲ್ಲ.... ಆತನ ಬಾಲ್ಯದ ಬದುಕಿನ ಪುಟಗಳನ್ನು ಹಿಂತಿರುಗಿಸಿ ನೋಡಿದರೆ ನಮಗೆ ಆತನ ಮನದ ತವಕ ಅರ್ಥವಾದೀತು.

1913 ರ ನವಂಬರ್ 7ರಂದು ಫ್ರೆಂಚ್ ಅಲ್ಜೀರಿಯಾದ ಮಾಂಡೋವಿ ಎಂಬ ಊರಿನಲ್ಲಿ ಅತ್ಯಂತ ಬಡತನದಿಂದ ಕೂಡಿದ ಒಂದು ಕುಟುಂಬದಲ್ಲಿ ಆಲ್ಬರ್ಟ್ ಕೇಮಸ್ ಜನಿಸಿದ. ಆತನಿಗೆ ಇನ್ನೂ ಒಂದು ವರ್ಷ ತುಂಬುವ ಮುನ್ನವೇ ಆತನ ತಂದೆ ಲೂಸಿಯನ್ ಅನ್ನು ಮೊದಲ ಮಹಾಯುದ್ಧ ಬಲಿ ತೆಗೆದುಕೊಂಡಿತ್ತು. ತಾಯಿ ಬೇರೊಬ್ಬರ ಮನೆಯ ಕಸ ಗುಡಿಸಿ, ನೆಲ ಒರೆಸುವ ಕೆಲಸವನ್ನು ನಿರ್ವಹಿಸಿ ತನ್ನ ಮಕ್ಕಳ ಹೊಟ್ಟೆ ಹೊರೆಯುತ್ತಿದ್ದಳು.

ಈಗಾಗಲೇ ಶಿಥಿಲವಾದ ಒಂದು ದುಡಿಯುವ ವರ್ಗದ ಅಪಾರ್ಟ್ಮೆಂಟ್ನಲ್ಲಿ ಅತ್ಯಂತ ಕಷ್ಟದಿಂದ ಜೀವಿಸುತ್ತಿದ್ದ ಅವರ ಮನೆಗೆ ನೀರು, ವಿದ್ಯುತ್ ಸಂಪರ್ಕಗಳು ಇರಲಿಲ್ಲ ಪುಸ್ತಕಗಳಂತೂ ತುಂಬಾ ದೂರ. ಹಾಸಿ ಹೊದೆಯುವಷ್ಟಿದ್ದ ತಣ್ಣಗಿನ ಬಡತನ ಅವರ ಮಕ್ಕಳ ಭವಿಷ್ಯವನ್ನು ನುಂಗಿ ಹಾಕಿತ್ತು.

ಕುಟುಂಬದ ಸದಸ್ಯರೆಲ್ಲರೂ ದುಡಿದರೆ ಮಾತ್ರ ಎಲ್ಲರೂ ಒಂದು ಹೊತ್ತು ಊಟ ಮಾಡಬಹುದು ಎಂಬಂತಹ ಪರಿಸ್ಥಿತಿಯಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ಪಾಲಕರಿಬ್ಬರು ದುಡಿಯಲು ಹೋಗಬಹುದು ಎಂಬುದು ಅವರನ್ನು ಶಾಲೆಗೆ ಕಳುಹಿಸಲು ಕಾರಣವಾಗಿತ್ತು. ದುಡಿಯುವ ವರ್ಗದ ಜನ ಕೂಡುವ, ಕಳೆಯುವ, ಅಕ್ಷರವನ್ನು ಅರಿಯುವ ಮೂಲಭೂತವಾದ ಕಲಿಕೆಯನ್ನು ಮಾತ್ರ ಕಲಿತು ನಂತರ ದುಡಿಮೆಗೆ ಹೋಗಬೇಕಾದ ಅನಿವಾರ್ಯತೆ ಅವರಿಗಿತ್ತು.

ತಮ್ಮಲ್ಲೊಬ್ಬ ಮಹಾನ್ ಲೇಖಕ ಉದಿಸುತ್ತಾನೆ ಎಂಬ ದೂರದೃಷ್ಟಿ ಅವರಲ್ಲಿ ಇರಲೇ ಇಲ್ಲ. ಅತ್ಯಂತ ತೆಳು ಕಾಯದ, ಶಾಂತವಾದ, ಗಮನಾರ್ಹವಾದ ಚೂಟಿ ಬಾಲಕನಾಗಿದ್ದ ಆಲ್ಬರ್ಟ್ ಶಾಲೆಯಲ್ಲಿ ಒಂದೆಡೆ ಕುಳಿತು ಕೊಳ್ಳುತ್ತಿದ್ದ. ಆತನ ಕುತೂಹಲದ ಕಣ್ಣುಗಳನ್ನು ದಿಟ್ಟಿಸಿ ಕೂಲಂಕುಶವಾಗಿ ಪರಿಶೀಲಿಸಿದ ಲೂಯಿಸರಿಗೆ ಆತನ ಕಲಿಕಾ ಆಸಕ್ತಿ, ಇಚ್ಛೆಯಿಂದ ಪಾಠವನ್ನು ಕೇಳುವ ಆಸಕ್ತಿ ಗುರುಗಳು ಆತನತ್ತ ಹೆಚ್ಚು ಗಮನ ಹರಿಸಲು ಕಾರಣವಾದವು ಒಬ್ಬ ಒಳ್ಳೆಯ ಶಿಕ್ಷಕ ಮಕ್ಕಳ ಆಸಕ್ತಿಯನ್ನು ಗಮನಿಸುವಂತೆ ಲೂಯಿಸ್ ಜರ್ಮನ್ ಕೂಡ ಬಾಲಕನ ಆಸಕ್ತಿಗೆ ನೀರೆರೆದು



ಆತನ ಭವಿಷ್ಯಕ್ಕೆ ಅತ್ಯುತ್ತಮ ಬುನಾದಿ ಹಾಕಿದರು. ಬಾಲಕನಿಗೆ ಸಾಕಷ್ಟು ಸಹಾಯ ಮಾಡುತ್ತಿದ್ದ ಅವರು ಆಲ್ಬರ್ಟ್ ನ ಕೈಯಲ್ಲಿ ಹತ್ತು ಹಲವು ಪುಸ್ತಕಗಳನ್ನು ಇಟ್ಟು ಅವುಗಳನ್ನು ಓದಲು ಹೇಳುತ್ತಿದ್ದರು. ಓದಿನ ಹಸಿವಿನಲ್ಲಿ ಬಡತನದ ಹಸಿವನ್ನು ಮರೆಯುತ್ತಿದ್ದ ಬಾಲಕನ ಆಸಕ್ತಿ ಕಂಡು ಶಾಲೆ ಮುಗಿದ ನಂತರವೂ ಕೂಡ ಆತನಿಗೆ ಹೊಸ ಹೊಸ ವಿಚಾರಗಳನ್ನು ತಿಳಿಸಿಕೊಡುವ, ಆತನ ಪ್ರಶ್ನೆಗಳಿಗೆ ಉತ್ತರಿಸುವ ಬಾಲಕನ ಮೆದುಳಿನ ಬಾಗಿಲನ್ನು ತೆರೆಯುವ ನಿಟ್ಟಿನಲ್ಲಿ ಗುರುಗಳು ಹೆಚ್ಚು ಆಸಕ್ತಿ ವಹಿಸಿದರು.

ಮಾಧ್ಯಮಿಕ ಶಾಲೆಗೆ ಕಡ್ಡಾಯವಾಗಿ ಬರೆಯಲೇಬೇಕಿದ್ದ ಪ್ರವೇಶ ಪರೀಕ್ಷೆಯಲ್ಲಿ ತನ್ನ ಹಿನ್ನೆಲೆಯನ್ನು ದಾಟಿ ಅತ್ಯುತ್ತಮ ವಿದ್ಯಾರ್ಥಿಯಾಗಿ ರೂಪುಗೊಳಿಸಿದ. ಅಲ್ಬರ್ಟ್ ಗೆ ಪ್ರತ್ಯೇಕವಾಗಿ ತರಬೇತಿ ನೀಡಿದ ಲೂಯಿಸ್ ಆತನನ್ನು ಪ್ರೋತ್ಸಾಹಿಸಿ ಸುಮ್ಮನಿರುವ ಮಕ್ಕಳು ಕೂಡ ಅವಕಾಶಕೊಟ್ಟರೆ ಚೆನ್ನಾಗಿ ಓದಬಲ್ಲರು ಎಂಬುದನ್ನು ಜಗತ್ತಿಗೆ ತೋರಿಸಿದ. ಆಲ್ಬರ್ಟ್ ಪರೀಕ್ಷೆಯಲ್ಲಿ ಪಾಸಾಗಿ ಮಾಧ್ಯಮಿಕ ಶಾಲೆಗೆ ನಂತರ ವಿಶ್ವವಿದ್ಯಾಲಯಕ್ಕೆ ತದನಂತರ ಪತ್ರಿಕೋದ್ಯಮ ಕಲಿಕೆಯಲ್ಲಿ ತೊಡಗಿಕೊಂಡ. ಜಗತ್ತಿನ ಎರಡನೇ ಮಹಾಯುದ್ಧದ ಕುರಿತಾದ ಪ್ರಬಂಧಗಳು, ಕಾದಂಬರಿಗಳು, ತತ್ವಶಾಸ್ತ್ರ ಹಾಗೂ ಅಂತರಾಷ್ಟ್ರೀಯ ವಿದ್ಯಮಾನಗಳ ಕುರಿತು ಆತ ಒಂದೇ ಸಮನೆ ಬರೆದ

ಆದರೆ ಇದೆಲ್ಲದರ ಹೊರತಾಗಿ ಪ್ರತಿಯೊಂದು ಪುಸ್ತಕ, ಪ್ರತಿಯೊಂದು ಹೊಸ ವಿಚಾರ, ಪ್ರತಿಯೊಂದು ಸಾಧನೆಯ ಹಿಂದೆ ತನ್ನನ್ನು ತಾನು ನಂಬುವಂತೆ ತನ್ನಲ್ಲಿ ಆತ್ಮವಿಶ್ವಾಸವನ್ನು ತುಂಬಿದ ತನ್ನ ಶಾಲೆಯ ಶಿಕ್ಷಕರ ಪಾತ್ರ ಬಹಳ ದೊಡ್ಡದು. ಬಡತನದ ಛಾಯೆಯಲ್ಲಿ ಆತನ ಪ್ರತಿಭೆ ಕಮರಿ ಹೋಗಲು ಲೂಯಿಸ್ ಜರ್ಮನ್ ಬಿಡಲಿಲ್ಲ.ಇದನ್ನು ಆಲ್ಬರ್ಟ್ ಕೇಮಸ್ ಮರೆತಿರಲಿಲ್ಲ.

ದಶಕಗಳ ನಂತರ ನೊಬೆಲ್ ಪ್ರಶಸ್ತಿಗೆ ಆತ ಆಯ್ಕೆಯಾದ ಪತ್ರ ಆತನನ್ನು ತಲುಪಿದಾಗ ನೆನಪಿಸಿಕೊಂಡಿದ್ದು ತನಗೆ ಓದು ಮತ್ತು ಬರಹಗಳಲ್ಲಿ ಆಸಕ್ತಿಯನ್ನು ಮೂಡಿಸಿದ ತನ್ನ ಶಾಲಾ ಶಿಕ್ಷಕರಾದ ಮಾನ್ಸಿಯರ್ ಲೂಯಿಸ್ ಜರ್ಮನ್ ರನ್ನು. ಅಂತೆಯೇ ಆತ 1957ರ ನವಂಬರ್ 19ರ ರಾತ್ರಿ ಬರೆದ ಪತ್ರ ಕೃತಜ್ಞತೆಯ ಕುರುಹಾಗಿ ಇತಿಹಾಸದಲ್ಲಿ ಅಚ್ಚಳಿಯದೆ ಉಳಿದುಕೊಂಡ ಪ್ರೀತಿ ಪೂರ್ವಕ ಪತ್ರವಾಗಿತ್ತು. ಆತ ಬರೆಯುವಾಗ ಆತನ ಮನೆಯ ಹೊರಭಾಗದಲ್ಲಿ ಆತನಿಗಾಗಿ ಕೂಡಿದ ಜನರ ಗದ್ದಲ ಕಡಿಮೆಯಾಗಿ ಸಂಪೂರ್ಣ ನಿಶ್ಯಬ್ದ ಆವರಿಸುವುದಕ್ಕೆ ಆತ ಕಾಯ್ದು ತನ್ನ ಹೃದಯದ ಮಾತುಗಳನ್ನು ಬರೆಯಲು ಕುಳಿತುಕೊಂಡ. ತನ್ನ ಸಾಧನೆಗೆ ದೊರೆತ ನೊಬೆಲ್ ಪ್ರಶಸ್ತಿ ಬಹಳ ದೊಡ್ಡದಾಗಿದ್ದು ಅಷ್ಟರಮಟ್ಟಿಗಿನ ಸಾಧನೆ ತನ್ನದಾಗಿಲ್ಲ.... ಅದೆಲ್ಲಾ ತನ್ನ ಶಿಕ್ಷಕರ ಕೃಪೆ ಎಂದು ಅತ್ಯಂತ ವಿನಮ್ರನಾಗಿ ಆತ ಬರೆದಿದ್ದನು.

ನೊಬೆಲ್ ಪ್ರಶಸ್ತಿ ಪ್ರಕಟವಾದ ಪತ್ರ ತನ್ನನ್ನು ತಲುಪಿದ ನಂತರ ತಾನು ಮೊದಲು ತಾಯಿಯನ್ನು ನಂತರ ಗುರುಗಳಾದ ತಮ್ಮನ್ನು ನೆನೆದುದನ್ನು ಅತ್ಯಂತ ಪ್ರಾಮಾಣಿಕವಾಗಿ ಬಿಚ್ಚಿಟ್ಟ ಆಲ್ಬರ್ಟ್, ಅತ್ಯಂತ ಬಡ ಕುಟುಂಬದ ಕುಡಿಯಾದ ತನ್ನ ಮೇಲೆ ಗುರುಗಳಾದ ಜರ್ಮನರ ಪ್ರೀತಿ, ತಾಳ್ಮೆ ಮತ್ತು ದಯೆ ತೋರದೆ ಹೋದಲ್ಲಿ ತನಗೆ ಇಂದು ಈ ಯಶಸ್ಸು ಸಾಧ್ಯವಾಗುತ್ತಿರಲಿಲ್ಲ ಎಂದು ತನ್ನ ಮನದ ಭಾವವನ್ನು

ಪತ್ರದಲ್ಲಿ ಬಿಚ್ಚಿಟ್ಟಿದ್ದರು. ಗುರುಗಳಾದ ಜರ್ಮನರ ಪ್ರಯತ್ನ ಹಾಗೂ ಗಂಟೆಗಟ್ಟಲೆ ಓರ್ವ ಬಡ ಪುಟ್ಟ ಬಾಲಕನ ಜೊತೆಗೆ, ಆತನ ಕಲಿಯುವಿಕೆಗೆ ವ್ಯಯ ಮಾಡಿದ ಕಾರಣವೇ ಎಂದು ಇಡೀ ಜಗತ್ತು ಆತನ ಯಶಸ್ಸನ್ನು ಆಚರಿಸುತ್ತಿದೆ ಎಂದು ಕೃತಜ್ಞತಾಪೂರ್ವಕವಾಗಿ ಹೇಳಿದರು.

ಬಹುದೊಡ್ಡ ಸಾಧನೆ, ಯಶಸ್ಸು ಮತ್ತು ಜನಮನ್ನಣೆ ಗಳಿಸಿದ ನಂತರ ಕೂಡ ಇಂದಿಗೂ ನಾನು ತಮ್ಮ ದಯೆಯ ಕೂಸು ಎಂದು ಪತ್ರದಲ್ಲಿ ಬರೆದುಕೊಂಡಿರುವ ರಾಬರ್ಟ್ ಈಗಲೂ ಕೂಡ ತನ್ನಲ್ಲಿ ಅಲ್ಜೀರಿಯಾದ ದಯಾಳು ಶಿಕ್ಷಕರು ನಂಬಿ ಗುರುತಿಸಿ ಬೆಳೆಸಿದ ಬಡ ಹುಡುಗ ಇದ್ದಾನೆ ಎಂದು ತೋಡಿಕೊಂಡಿದ್ದಾರೆ.

ಹೀಗೆ ತನ್ನ ಗುರುಗಳಿಗೆ ಒಂದು ಪತ್ರವನ್ನು ಬರೆಯುವಾಗ ಆಲ್ಬರ್ಟ್ ರಲ್ಲಿ ಓರ್ವ ಯಶಸ್ವಿ ವ್ಯಕ್ತಿಯ ಭಾವ ಖಂಡಿತವಾಗಿಯೂ ಇರಲಿಲ್ಲ, ಬದಲಾಗಿ ತನ್ನ ಮನದಾಳದ ಭಾವಗಳನ್ನು ಪುಟ್ಟ ಬಾಲಕನೊಬ್ಬ ತನ್ನ ತಾಯಿಯ ಬಳಿ ನಿವೇದಿಸಿಕೊಂಡ ರೀತಿಯಲ್ಲಿಯೇ ಅವರ ಒಕ್ಕಣೆ ಇತ್ತು. ಆತನ ಇಂದಿನ ಬೆಳವಣಿಗೆಯಲ್ಲಿ ಗುರುಗಳ ಪಾಲು ಸಾಕಷ್ಟಿದೆ ಎಂಬುದನ್ನು ಆತ ಮತ್ತೆ ಮತ್ತೆ ನೆನಪು ಮಾಡಿಕೊಂಡಿದ್ದ.

ಲೂಯಿಸ್ ಜರ್ಮನ್ ಇದೀಗ ಮುದುಕರಾಗಿದ್ದು ಆಲ್ಬರ್ಟ್ ನ ಪತ್ರಕ್ಕೆ ಅವರು ಹೀಗೆ ಮರುತ್ತರ ಬರೆದರು ಅದರಲ್ಲಿ ಅವರು ಆಲ್ಬರ್ಟನನ್ನು ಗುರುತಿಸಿದ ಕೀರ್ತಿಯನ್ನು ತಮ್ಮದಾಗಿಸಿಕೊಳ್ಳಲಿಲ್ಲ ಬದಲಾಗಿ ತಮ್ಮ ಓರ್ವ ಹಳೆಯ ವಿದ್ಯಾರ್ಥಿ ತಾನು ನೀಡಿದ ಶಿಕ್ಷಣದ ಪರಿಣಾಮವಾಗಿ ಬದುಕಿನಲ್ಲಿ ಅರ್ಥಪೂರ್ಣವಾದ ಯಶಸ್ಸನ್ನು ಸಾಧಿಸಿರುವುದಕ್ಕೆ ಸಂತಸವನ್ನು ವ್ಯಕ್ತಪಡಿಸಿದ್ದರು. ಆಲ್ಬರ್ಟ್ ಕೆಮಸ ತಮ್ಮಲ್ಲಿರುವ ಗುರುವಿಗೆ ನಿಜವಾದ ಪುರಸ್ಕಾರವನ್ನು ನೀಡಿದ್ದಾನೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು. ವಿದ್ಯಾರ್ಥಿಯೊಬ್ಬ ತಮ್ಮ ಗುರುಗಳನ್ನು ನೆನಪಿಸಿಕೊಂಡು ಹೇಳಿರುವುದು ಯಾವುದೇ ಬಿರುದು ಬಾವಲಿಗಳಿಗಿಂತ, ದೊಡ್ಡ ಅಂಕಿಯ ಸಂಬಳಕ್ಕಿಂತ ಹೆಚ್ಚಿನದ್ದು ಎಂದು ಆತ ಅಭಿಪ್ರಾಯ ಪಟ್ಟರು.

ಮುಂದಿನ ವರ್ಷಗಳಲ್ಲಿ ಖಂಡಗಳನ್ನು ದಾಟಿ ಅವರಿಬ್ಬರೂ ಪರಸ್ಪರ ಪತ್ರ ಸಂಪರ್ಕದ ಮೂಲಕ ಭೇಟಿಯಾದರು. ಅವರ ಪತ್ರಗಳಲ್ಲಿ ಮಾನವೀಯ ಮಿಡಿತದ ತಂತುಗಳು ಹಾಗೂ ಚಿಕ್ಕ ಪುಟ್ಟ ಕ್ರಿಯೆಗಳ ಅಗಾಧ ಪರಿಣಾಮಗಳನ್ನು ನಾವು ಕಾಣಬಹುದು.

1960ರ ಜನವರಿ 4ರಂದು ತನ್ನ ಪುಸ್ತಕಗಳ ಪ್ರಕಾಶಕರಾದ ಮೈಕಲ್ ಗ್ಯಾಲಿಮರ್ಡರೊಂದಿಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಆಲ್ಬರ್ಟ್ ಕೇಮಸ್ ಕಾರು ರಸ್ತೆಯ ಬದಿಯ ಮರವೊಂದಕ್ಕೆ ಗುದ್ದಿದ ಪರಿಣಾಮವಾಗಿ ನಡೆದ ಅಪಘಾತದಲ್ಲಿ ಆಲ್ಬರ್ಟ್ ಸ್ಥಳದಲ್ಲಿಯೇ ಮೃತಪಟ್ಟರು, ಆಗ ಅವರಿಗೆ ಕೇವಲ 46 ವರ್ಷ ವಯಸ್ಸಾಗಿತ್ತು.

ಅವರ ಪುಟ್ಟ ಬ್ರೀಫ್ ಕೇಸಿನಲ್ಲಿ ಅಪೂರ್ಣವಾದ ಕಾದಂಬರಿಯ ಹಸ್ತ ಪ್ರತಿಯ ಜೊತೆಗೆ ಆತನ ಬದುಕಿನ ದಿಕ್ಕನ್ನು ಬದಲಾಯಿಸಿದ ಗುರುಗಳ ಕುರಿತಾದ ಮಾಹಿತಿಯನ್ನು ಹೊತ್ತ ಪತ್ರಗಳು ಹಾಗೂ ತಾಯಿಯೊಂದಿಗಿನ ಅವರ ಆತ್ಮಿಕ ಸಂಬಂಧದ ಕುರಿತ ಮಾಹಿತಿಗಳು ದೊರೆಯಿತು.

ಯಶಸ್ಸಿನ ಅತ್ಯುನ್ನತ ಶಿಖರದಲ್ಲಿ ಇದ್ದಾಗಲೂ ಕೂಡ ಆತ ತನ್ನನ್ನು ಅಲ್ಲಿಗೆ ತಲುಪಲು ಕೈ ಹಿಡಿದು ಮೊದಲ ಹೆಜ್ಜೆ ಇಡಲು ಪ್ರೇರೇಪಿಸಿದ ಗುರುಗಳನ್ನು ಮರೆಯದೆ ಅವರ ಪತ್ರಗಳನ್ನು ಸದಾ ತನ್ನೊಂದಿಗೆ ಒಯ್ಯುತ್ತಿದ್ದುದು ಅವರ ನಡುವಿನ ಅವಿನಾಭಾವ ಸಂಬಂಧಕ್ಕೆ ಸಾಕ್ಷಿಯಾಗಿತ್ತು.

ಸ್ನೇಹಿತರೆ ! ಈ ಕಥೆ ಕೇವಲ ಅಲ್ಬರ್ಟ್ ಕೇಮಸ್ ಎಂಬ ನೊಬೆಲ್ ಪ್ರಶಸ್ತಿ ಪುರಸ್ಕೃತ ಸಾಹಿತಿಯದಲ್ಲ.... ಇದು ಲೂಯಿಸ್ ಜರ್ಮನ ರಂತಹ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸುವ, ಮಕ್ಕಳ ಜ್ಞಾನದ ಹಸಿವನ್ನು ತೀರಿಸುವ, ಅವರನ್ನು ಪ್ರೋತ್ಸಾಹಿಸುವ ಪ್ರತಿಯೊಬ್ಬ ನಿಸ್ವಾರ್ಥ ಶಿಕ್ಷಕರ ಕಥೆಯಾಗಿದೆ.

ಬೇರೆಯವರು ನೀವು ಕೇಳಿದ ಪ್ರಶ್ನೆಗಳನ್ನು ಅನವಶ್ಯಕ ಎಂದು ತಳ್ಳಿ ಹಾಕಿದ ಸಮಯದಲ್ಲಿ ದಿನಗಟ್ಟಲೆ ಕುಳಿತು ಆ ಪ್ರಶ್ನೆಗೆ ಉತ್ತರ ಹುಡುಕಿದ ಪ್ರತಿಯೊಬ್ಬ ಶಿಕ್ಷಕರ ಕಥೆ ಇದು.ತಾನು ಕಲಿಸಿದ ಮಗುವಿನ ಭವಿಷ್ಯದ ಕುರಿತಾಗಿ ಪತ್ರ ಬರೆದು ಶಿಫಾರಸು ಮಾಡಿದ ಶಿಕ್ಷಕರ ಕಥೆ ಇದು.

ಬಹಳಷ್ಟು ಜನರಿಗೆ ನೊಬೆಲ್ ಪ್ರಶಸ್ತಿಯ ನಂತರದ ಧನ್ಯವಾದ ಪತ್ರಗಳು ದೊರೆಯಲಿಕ್ಕಿಲ್ಲ ನಿಜ.ಬಹಳಷ್ಟು ಜನ ಶಿಕ್ಷಕರಿಗೆ ತಾವು ಮಕ್ಕಳಲ್ಲಿ ಬಿತ್ತಿದ ಯಾವ ಬೀಜ ಮೊಳಕೆಯೊಡೆದು ಬೃಹತ್ ಹೆಮ್ಮರವಾಗಿ ಬೆಳೆದು ನಿಂತಿದೆ ಎಂದು ಗುರುತಿಸುವ ಅವಕಾಶಗಳು ಸಿಗಲಿಕ್ಕಿಲ್ಲ. ಅವರ ವಿದ್ಯಾರ್ಥಿಗಳಲ್ಲಿ ಯಾರೋ ಒಬ್ಬರು ವೈದ್ಯರಾಗಿ ರೋಗಿಗಳ ಸೇವೆಯಲ್ಲಿ, ಅವರ ಜೀವವನ್ನು ಉಳಿಸುವಲ್ಲಿ, ನ್ಯಾಯಕ್ಕಾಗಿ ಹೋರಾಡುವ ವಕೀಲನಾಗಿ, ದೇಶವನ್ನು ಕಟ್ಟುವ ಇಂಜಿನಿಯರಾಗಿ ಮಕ್ಕಳ ಭವಿಷ್ಯವನ್ನು ಬರೆಯುವ ಶಿಕ್ಷಕನಾಗಿ ಎಲ್ಲರಿಗೂ ಅನ್ನ ನೀಡುವ ರೈತನಾಗಿ ತನ್ನ ಬದುಕನ್ನು ಕಟ್ಟಿಕೊಂಡಿರಬಹುದು ಎಂದು ಗೊತ್ತಿರಲಿಕ್ಕಿಲ್ಲ.... ಶಿಕ್ಷಕರು ನಮ್ಮ ಮಕ್ಕಳ ಭವಿಷ್ಯದ ಅಗೋಚರ ನಿರ್ಮಾತೃಗಳು.

ಆಲ್ಬರ್ಟ್ ಕೇಮಸ್ ನ ಬದುಕಿಗೆ ಹೊಸ ಹೊಳಹನ್ನು ತೋರಿಸಿಕೊಟ್ಟ ಗುರುಗಳೊಂದಿಗೆ ಪತ್ರ ವ್ಯವಹಾರ ಮಾಡಿ ತನ್ನ ಬದುಕಿನಲ್ಲಿ ಅವರ ಸ್ಥಾನವನ್ನು ತೋರಿಸಿಕೊಟ್ಟು ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾನೆ. ಸ್ನೇಹಿತರೆ! ಇದೀಗ ನಮ್ಮ ಪಾಳಿ. ನಮ್ಮ ಬದುಕಿನಲ್ಲಿ ನಮ್ಮ ಇಂದಿನ ಸಾಧನೆಗೆ ಕಾರಣವಾದ ರೀತಿಯಲ್ಲಿ ನಮ್ಮನ್ನು ಗುರುತಿಸಿ ತಾವು ಅಗೋಚರರಾಗಿ ಉಳಿದು ಹೋದ ಶಿಕ್ಷಕರಿಗೆ ಹೀಗೊಂದು ಪತ್ರ ಬರೆದು ಇಲ್ಲವೇ ಮುಖತಃ ಭೇಟಿಯಾಗಿ ನಾವು ಕೃತಜ್ಞತೆ ಹೇಳುವ ಸಮಯ ಇದಾಗಿದೆ.

ಯಶಸ್ಸು ಎನ್ನುವುದು ಕೇವಲ ಪತ್ರಿಕೆಯ ಹೆಡ್ ಲೈನ್ ಗಳಲ್ಲಿ ಬಂದು ಹೋಗುವ ವ್ಯಕ್ತಿಯದ್ದು ಮಾತ್ರವಲ್ಲ... ಆತನ ಪ್ರತಿ ಯಶಸ್ಸಿನ ಹಿಂದೆ ಇರುವ ಆತನ ಕುಟುಂಬದ ಸದಸ್ಯರು, ಶಿಕ್ಷಕರು ಆತನಿಗೆ ಬೆಂಬಲಿಸಿದವರು ಸಹಕಾರ ನೀಡಿದವರು ಹೀಗೆ ವ್ಯಕ್ತಿಯೊಬ್ಬನ ಯಶಸ್ಸಿನಲ್ಲಿ ಆತನ ಜೊತೆಗೆ ಇರುವ, ಈ ಹಿಂದೆ ಇದ್ದ ವ್ಯಕ್ತಿಗಳ ಪಾಲು ಬಹು ದೊಡ್ಡದು. ವ್ಯಕ್ತಿಯ ಬದುಕಿನ ದುರ್ಬರ ಗಳಿಗೆಗಳಲ್ಲಿ ಆತನನ್ನು ಎತ್ತಿ ಹಿಡಿದ, ಆತ್ಮವಿಶ್ವಾಸ ತುಂಬಿದ, ನಾವಿದ್ದೇವೆ ಭಯ ಬೇಡ ಎಂದು ಭರವಸೆ ನೀಡಿದ, ಆತನ ಪ್ರತಿಭೆಯಲ್ಲಿ ನಂಬಿಕೆ ಇಟ್ಟ ಆತನ ಬೆಳವಣಿಗೆಗೆ ಕಾರಣರಾದ ಹತ್ತು ಹಲವರ ಪಾಲಿರುತ್ತದೆ.

ಅಲ್ಬರ್ಟ್ ಕೇಮಸ್ ಗೆ ನೊಬೆಲ್ ಪ್ರಶಸ್ತಿ ದೊರೆತ ಪತ್ರವನ್ನು ಪಡೆದಾಗ ತಾನು ಅದನ್ನು ಪಡೆಯುವಷ್ಟು ಅರ್ಹತೆಯನ್ನು ಗಳಿಸಿಕೊಳ್ಳಲು ಕಾರಣರಾದವರನ್ನು ಮೊದಲು ನೆನೆದ ಪರಿಣಾಮವಾಗಿ ಬರೆದ ಕೃತಜ್ಞತಾ ಪತ್ರ ಕೇವಲ ಒಂದು ಮಾಹಿತಿ ಪತ್ರವಲ್ಲ ಬದಲಾಗಿ ಓರ್ವ ವ್ಯಕ್ತಿಯ ಗುರುತಿಸುವಿಕೆಯಾಗಿತ್ತು. ಕೃತಜ್ಞತೆಯಾಗಿತ್ತು. ಮನೆ ಕೆಲಸಗಳನ್ನು ಮಾಡಿ ತನ್ನನ್ನು ಶಾಲೆಗೆ ಓದಲು ಕಳುಹಿಸಿ ಬೆಳೆಸಿದ ತಾಯಿ, ತನಗಾಗಿ ಜಗತ್ತಿನ ಹತ್ತು ಹಲವು ಸುದ್ದಿಗಳನ್ನು ಶೈಕ್ಷಣಿಕ ವಿಷಯಗಳನ್ನು ಶಾಲೆ ಮುಗಿದ ನಂತರವೂ ಹೇಳಿಕೊಡುತ್ತಿದ್ದ ಶಿಕ್ಷಕರನ್ನು ಆತ ನೆನೆಯಲು ಕಾರಣ ಆತನಿಗೆ ಸ್ಪಷ್ಟವಾಗಿ ಗೊತ್ತಿತ್ತು. ಸುಂದರವಾದ ಹೂವು ಹಣ್ಣುಗಳನ್ನು ಕೊಡುತ್ತಿರುವ ಮರವೊಂದು ಅಷ್ಟು ಗಟ್ಟಿ ಮುಟ್ಟಾಗಿ ನೆಲದ ಮೇಲೆ ನಿಂತುಕೊಳ್ಳಲು ಕಾರಣವಾಗಿರುವುದು ಭೂಮಿಯ ತಳ ಭಾಗದಲ್ಲಿ ಮಣ್ಣಿನ ಸಾರವನ್ನು ಹೀರಿ ನೀರು ಮತ್ತು ಪೋಷಕಾಂಶಗಳನ್ನು ತನಗೆ ಕೊಡ ಮಾಡುತ್ತಿರುವ ಅಗೋಚರ ಬೇರುಗಳು ಎಂದು.

ಸ್ನೇಹಿತರೇ.. ಈಗಲೂ ಕಾಲ ಮಿಂಚಿಲ್ಲ. ನಮ್ಮ ಬದುಕಿಗೆ ದಾರಿ ತೋರಿದ ಪಾಲಕರನ್ನು, ಶಿಕ್ಷಕರನ್ನು, ಸಂಬಂಧಗಳನ್ನು, ಬೆಂಬಲಿಸಿದ ಸ್ನೇಹಿತರನ್ನು, ನೆರೆಹೊರೆಯವರನ್ನು ಗುರುತಿಸಿ ಅವರಿಗೆ ಕೃತಜ್ಞತೆ ಅರ್ಪಿಸೋಣ. ಬದುಕಿನ ಇಳಿಗಾಲದಲ್ಲಿ ಇರುವ ಎಷ್ಟೋ ಜೀವಿಗಳಿಗೆ ನಮ್ಮ ಈ ಒಂದು ಕೃತಜ್ಞತೆಯ ಮಾತು ಧನ್ಯತೆಯ ಮತ್ತು ನೆಮ್ಮದಿಯ ಭಾವವನ್ನು ಮೂಡಿಸಬಹುದು. ವಯಸ್ಸಿನ ಭಾರದಿಂದ ಬಾಗಿರುವ ಬೆನ್ನನ್ನು ನೇರವಾಗಿಸಿ ತೃಪ್ತಿಯ ಭಾವದಿಂದ ಎದೆಯನ್ನು ಉಬ್ಬಿಸಿ ಸಂತಸಪಡಬಹುದು. ಏನಂತೀರಾ?

**ವೀಣಾ ಹೇಮಂತಗೌಡ ಪಾಟೀಲ್,**
**ಮುಂಡರಗಿ, ಗದಗ್**

## ನೆರೆಹೊರೆಯವರ ಹಕ್ಕುಗಳು ರಾಷ್ಟ್ರವ್ಯಾಪಿ ಅಭಿಯಾನ 2025 ಅಂಗವಾಗಿ ಜಾತ




ಯುವಮಾರ್ಗ ಸುದ್ದಿ

**ಮಾನ್ವಿ,ಡಿ.1–** ಪಟ್ಟಣದ ಕುಬ್ಬ ಮಸೀದಿಯ ಆವರಣದಲ್ಲಿ ಜಮಾಅತೆ ಇಸ್ಲಾಮಿ ಹಿಂದ್ ಹಾಗೂ ಜಿ.ಐ.ಓ. ಸಿ.ಐ.ಓ. ತಾಲೂಕು ಘಟಕಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ನೆರೆಹೊರೆಯವರ ಹಕ್ಕುಗಳು ರಾಷ್ಟ್ರವ್ಯಾಪಿ ಅಭಿಯಾನ 2025 ಅಂಗವಾಗಿ ನಡೆದ ಜಾತ ಕಾರ್ಯಕ್ರಮಕ್ಕೆ ಜಮಾಅತೆ ಇಸ್ಲಾಮಿ ಹಿಂದ್ ತಾಲೂಕು ಘಟಕದ ಅಧ್ಯಕ್ಷರಾದ ಅಬ್ದುಲ್ ರೆಹಮಾನ್ ಚಾಲನೆ ನೀಡಿ ಮಾತನಾಡಿ ಇಂದಿನ ಆಧುನಿಕ ಜೀವನ ಪದ್ಧತಿಯಿಂದಾಗಿ ಜೀವನ ವಿಧನಗಳು ಬದಲಾಗಿದ್ದು ಜನರಲ್ಲಿ ಏಕಾಂತ ಪ್ರಿಯತೆ, ಸಾಂಸ್ಕೃತಿಕ ಧ್ರುವೀಕರಣ ಹಾಗೂ ಡಿಜಿಟಲ್ ಲೋಕ ಮುಂತಾದವುಗಳಿಂದಾಗಿ ನೆರೆಹೊರೆಯವರು ಪರಸ್ಪರ ದೂರವಾಗುತ್ತಿದ್ದಾರೆ ಹಾಗೂ ನೆರೆಹೊರೆಯ ಸಂಬಂಧಗಳು ದೂರವಾಗುತ್ತಿವೆ. ಆದ್ದರಿಂದ ಜಮಾಅತೆ ಇಸ್ಲಾಮಿ ಹಿಂದ್ ವತಿಯಿಂದ ಮನೆಯ ಸುತ್ತ ಮುತ್ತಲಿನಲ್ಲಿ ವಾಸಮಾಡುತ್ತಿರುವ ನಿವಾಸಿಗಳೊಂದಿಗೆ ಸೌಹಾರ್ಧಯುತವಾದ ಸಂಬಂದಗಳನ್ನು ಮರು ಸ್ಥಾಪಿಸುವುದಕ್ಕಾಗಿ ರಾಷ್ಟ್ರವ್ಯಾಪ್ತಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಹಲವು ಕಾರ್ಯಕ್ರಮಗಳ ಮೂಲಕ ನೆರೆಹೊರೆಯವರ ಹಕ್ಕುಗಳ ಅರಿವು ಮೂಡಿಸುವುದರ ಜೊತೆಗೆ ಮಾದರಿ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ಮುಂದಾಗೋಣ ಎಂದು ತಿಳಿಸಿದರು

ಜಮಾತೆ ಇಸ್ಲಾಮಿ ಹಿಂದ್ ರಾಯಚೂರು ಜಿಲ್ಲಾ ಸಂಚಾಲಕರಾದ ಅಬ್ದುಲ್ ಕರೀಂ ಖಾನ್ ಮಾತನಾಡಿದರು.

ಪಟ್ಟಣದ ಕುಬ್ಬ ಮಸೀದಿಯಿಂದ ಪ್ರಮುಖ ಬೀದಿಗಳ ಮೂಲಕ ಬಸವ ವೃತ್ತ ದಿಂದ ಟಿ.ಎ.ಪಿ.ಸಿ.ಎಂ.ಎಸ್. ಬಯಲು ಜಾಗದ ವರೆಗೆ ನೆರೆಹೊರೆಯವರ ಹಕ್ಕುಗಳು ರಾಷ್ಟ್ರವ್ಯಾಪಿ ಅಭಿಯಾನ 2025 ಜಾತ ನಡೆಯಿತು.

ಜಾತದಲ್ಲಿ ಜಮಾಅತೆ ಇಸ್ಲಾಮಿ ಹಿಂದ್ ಹಾಗೂ ಜಿ.ಐ.ಓ. ಸಿ.ಐ.ಓ. ತಾಲೂಕು ಘಟಕಗಳ ನೂರಾರು ಸದಸ್ಯರು ಭಾಗವಹಿಸಿದರು.

ಕಾರ್ಯದರ್ಶಿಗಳಾದ ಸಬ್ಜಲಿ, ಮಹಿಳಾ ಘಟಕ ಅಧ್ಯಕ್ಷರಾದ ಸೈಯಾದ ಇಶಾರತ್ ಜಹ , ,ಜಿ.ಐ.ಹೆಚ್, ಮಹಿಳಾ ಘಟಕದ ಅಧ್ಯಕ್ಷರಾದ ಆಯಶಾ ಖಾನಮ್ , ಶಂಶದ್ ಬೇಗಂ ಸದಸ್ಯರಾದ ಮೊಹಮ್ಮದ್ ದವೂದ ಸಿದ್ದಿಕಿ, ಉಮರ್ ಫಾರೂಕ್ ದೇವರಮನಿ, ಶೇಕ್ ಬಾಬಾ ಹುಸೇನ್ , ನಾಸೀರ್ ಅಲಿ, ಎಂ.ಎಂ.ಖಾನ್, ಮೆಹಮೂದ್,ಮಾಹಮ್ಮದ್ ಮುರ್ತುಜ,ಸೇರಿದಂತೆ ಇನ್ನಿತರರು ಇದ್ದರು.

## ಖೇಲೋ ಇಂಡಿಯಾ ಕ್ರೀಡಾಕೂಟಕ್ಕೆ ಆಯ್ಕೆಯಾದ ಲೊಯೋಲಾ ಶಾಲೆಯ ವಿದ್ಯಾರ್ಥಿನಿಯರು.




**ಮಾನ್ವಿ,ಡಿ.1–** ರಾಯಚೂರಿನ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಖೇಲೋ ಇಂಡಿಯಾ ಕ್ರೀಡಾಕೂಟದ ಅಯ್ಕೆ ಪ್ರಕ್ರೀಯೆಯಲ್ಲಿ 14 ಮತ್ತು 17 ವರ್ಷದ ಬಾಲಕಿಯರ ವಿಭಾಗದಲ್ಲಿ ಪಟ್ಟಣದ ಲೊಯೋಲಾ ಶಾಲೆಯ 10 ನೇ ತರಗತಿ ವಿದ್ಯಾರ್ಥಿನಿ ಸೌಭಾಗ್ಯ.ಕೆ.ಆರ್. ಗುಂಡು ಎಸೆತ , ಬರ್ಚಿ ಎಸೆತ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ ಚಕ್ರ ಎಸೆತದಲ್ಲಿ ತೃತೀಯ ಸ್ಥಾನ. ಪಡೆದು ಆಯ್ಕೆಯಾದರೆ 8ನೇ ತರಗತಿಯ ಕೆ.ಹೇಮಲತಾ ಉದ್ದ ಜಿಗಿತ ಪ್ರಥಮ ಸ್ಥಾನ, ಗುಂಡು ಎಸೆತ ಹಾಗೂ 60ಮೀ ಓಟದಲ್ಲಿ ದ್ವಿತೀಯ ಸ್ಥಾನ ಪಡೆದು ಆಯ್ಕೆಯಾಗಿರುವುದಕ್ಕೆ ಲೊಯೋಲಾ ಶಾಲೆಯ ನಿರ್ದೇಶಕರಾದ ಫಾ. ಸಿರಿಲ್ ರಾಜ್ ಎಸ್ ಜೆ , ಮುಖ್ಯಗುರು: ಸಿಸ್ಟರ್ ಜೂಲಿಯಟ್ , ಉಪಮುಖ್ಯಗುರು : ಡೇವಿಡ್ ಕುಮಾರ್ , ದೈಹಿಕ ಶಿಕ್ಷಣ ಶಿಕ್ಷಕರಾದ ಲತೀಫ್ ಸಾಬ್, ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ

ಯುವ ಮಾರ್ಗ

ಮಂಗಳವಾರ: 02–12–2025

## ಗ್ರಾಮ ಪಂಚಾಯತ್ ನೂತನ ಕಟ್ಟಡ ಉದ್ಘಾಟಿಸಿದ ಶಾಸಕ ಹಂಪನಗೌಡ ಬಾದರ್ಲಿ



ಯುವಮಾರ್ಗ ಸುದ್ದಿ

**ಸಿಂಧನೂರು,ಡಿ.1–** ಸಮೀಪದ ಗೋನವಾರ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾದ ಗ್ರಾಮ ಪಂಚಾಯತ್ ಕಟ್ಟಡವನ್ನು ಶಾಸಕ ಹಂಪನಗೌಡ ಬಾದರ್ಲಿ ಅವರು ಸೋಮವಾರ ಉದ್ಘಾಟಿಸಿದರು.

ಶಾಸಕರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿಗಳ ಕಾರ್ಯವು ಅತ್ಯಂತ ಪ್ರಮುಖವಾದುದು ಎಂದು ಒತ್ತಿ ಹೇಳಿದರು. "ನಾನು ಜಿಲ್ಲಾ ಪಂಚಾಯಿತಿ ಸದಸ್ಯನಾಗಿ, ಐದು ಬಾರಿ ಶಾಸಕನಾಗಿ ಆಯ್ಕೆಯಾಗಿದ್ದೇನೆ. ಯಾರು ಉತ್ತಮವಾಗಿ ಕೆಲಸ ಮಾಡಿ ಜನರ ಪ್ರೀತಿ ವಿಶ್ವಾಸ ಗಳಿಸುತ್ತಾರೋ ಅವರಿಗೆ ದೊಡ್ಡ ಸ್ಥಾನ ಸಿಕ್ಕೇ ಸಿಗುತ್ತದೆ," ಎಂದರು.

"ನಮ್ಮ ದೇಶದಲ್ಲಿ ಶೇಕಡ 80 ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಕೇಂದ್ರೀಕರಣ ವ್ಯವಸ್ಥೆಯ ಮೂಲಕ ಈ 80% ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಅಧಿಕಾರವನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಿವೆ. ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಅಧ್ಯಕ್ಷರು ಗ್ರಾಮದ ಬಗ್ಗೆ ಕಳಕಳಿಯನ್ನು ಇಟ್ಟುಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು," ಎಂದು ಶಾಸಕರು ಕಿವಿಮಾತು ಹೇಳಿದರು.

ಕೆಲವು ಜಿಲ್ಲೆಗಳಲ್ಲಿ ಗ್ರಾಮ ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಶಾಸಕರಿಗಿಂತಲೂ ಹೆಚ್ಚು ಕೆಲಸ ಮಾಡಿದ ಉದಾಹರಣೆಗಳಿವೆ ಎಂದ ಅವರು, "ಚುನಾಯಿತ ಪ್ರತಿನಿಧಿಗಳು ಇದು ನಮ್ಮ ಮನೆ ಕೆಲಸ, ಜನಸಾಮಾನ್ಯರಿಗಾಗಿ ಮಾಡುವ ಕೆಲಸ ಎಂದು ಚಿಂತನೆ ಮಾಡಿ ಕಾರ್ಯನಿರ್ವಹಿಸಬೇಕು. ಸರ್ಕಾರದಿಂದ ಬಂದ ಅನುದಾನದ ಕುರಿತು ಜನಸಾಮಾನ್ಯರಿಗೆ ಸಂಪೂರ್ಣ ತಿಳುವಳಿಕೆ ಮೂಡಿಸುವ ಕೆಲಸವಾಗಬೇಕು," ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನಿವೃತ್ತಿ ಹೊಂದಿದ ವಾಟರ್‌ಮ್ಯಾನ್ ರಾಮಣ್ಣ ಅವರನ್ನು ಸನ್ಮಾನಿಸಿ, ಆತ್ಮೀಯವಾಗಿ ಬೀಳ್ಕೊಡಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಗಬುರ್ ಸಾಬ್ ಗೋನವಾರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಅಬ್ಬಾಸಲ್ಲಿ ಮಠ, ಖಾಜಿ ಮಲಿಕ್ ವಕೀಲರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಮಂಜುಳಾ ಪಿ ಗಂ ಪಂಪಾಪತಿ ನಾಯಕ, ಉಪಾಧ್ಯಕ್ಷರಾದ ನರಸಮ್ಮ ಗಂ ಹನುಮಂತಪ್ಪ ಹೊಸಮನಿ, ಸದಸ್ಯರಾದ ಶ್ರೀದೇವಿ ಗಂ ಮಲ್ಲಯ್ಯ ಮ್ಯಾಕಲ, ನಾಗರೆಡ್ಡಿ ತಂ ಶರಣಪ್ಪ, ನಾಗಯ್ಯ ತಂ ರಂಗಯ್ಯ ಬುಳ್ಳಿ, ರಂಗಮ್ಮ ಗಂ ದೊಡ್ಡ ಹುಸೇನಪ್ಪ, ದುರುಗಮ್ಮ ಗಂ ಸಣ್ಣ ದೇವೇಂದ್ರಪ್ಪ, ರಾಮನಗೌಡ ತಂ ನಾರಾಯಣಪ್ಪ, ಹನುಮವ್ವ ಗಂ ಅಯ್ಯನಗೌಡ ಪೊಲೀಸ್ ಪಾಟೀಲ್, ಮಹಾದೇವಿ ಗಂ ಸಣ್ಣ ಬಸವರಾಜ, ಯಲ್ಲಮ್ಮ ಗಂ ಭೀಮರಾಯಪ್ಪ, ನಿಂಗಮ್ಮ ಗಂ ರಾಮು, ಹನುಮಂತ ತಂ ನಿಂಗಯ್ಯ, ಶಿವರಾಜ ತಂ ಈರಪ್ಪ ಉಪಸ್ಥಿತರಿದ್ದರು.

## ಕ್ರಿಸ್‌ಮಸ್ ಹಬ್ಬಕ್ಕೆ ವಿಶೇಷ ರೈಲುಗಳ ವ್ಯವಸ್ಥೆ




**ಬೆಂಗಳೂರು,ಡಿ.1–** ಕ್ರಿಸ್ಮಸ್ ಹಬ್ಬದ ಸಂದರ್ಭದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿಭಾಯಿಸಲು, ನೈಋತ್ಯ ರೈಲ್ವೆಯು ಬೆಂಗಳೂರು ಕಂಟೋನೆಂಟ್ ಮತ್ತು ಬೀದರ್ ನಡುವೆ ಒಂದು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲು ಬಿಡುಗಡೆ ಮಾಡಿದೆ.

ಡಿ.24ರಂದು ಬುಧವಾರ ರೈಲು ಸಂಖ್ಯೆ 06291 ಬೆಂಗಳೂರು ಕಂಟೋನೆಂಟ್ ಬೀದರ್ ವಿಶೇಷ ಎಕ್ಸ್ ಪ್ರೆಸ್ ರೈಲು ಬೆಂಗಳೂರಿನಿಂದ ರಾತ್ರಿ 9:15ಕ್ಕೆ ಹೊರಟು, ಮರುದಿನ ಬೆಳಿಗ್ಗೆ 11:30ಕ್ಕೆ ಬೀದರ್ ತಲುಪಲಿದೆ.ಮತ್ತೊಂದೆಡೆ, ಮರಳಿ ಸಂಚರಿಸುವ 06292 ಬೀದರ್ ರೈಲು ಬೆಂಗಳೂರು ಕ್ಯಾಂಟ್ ವಿಶೇಷ ಎಕ್ಸ್‌ಪ್ರೆಸ್ ರೈಲು 25ರಂದು ಗುರುವಾರ ಬೀದರ್‌ನಿಂದ ಮಧ್ಯಾಹ್ನ 1 ಗಂಟೆಗೆ ಹೊರಟು, ಮರುದಿನ ಬೆಳಗಿನ ಜಾವ 4ಕ್ಕೆ ಬೆಂಗಳೂರು ಕಂಟೋನೆಂಟ್ ತಲುಪಲಿದೆ.ಮಾರ್ಗಮಧ್ಯದಲ್ಲಿ ಈ ವಿಶೇಷ ರೈಲು ಯಲಹಂಕ, ಹಿಂದೂಪುರ, ಧರ್ಮಾವರಂ, ಅನಂತಪುರ, ಗುಂತಕಲ್, ಆದೋನಿ, ಮಂತ್ರಾಲ ಯಂ ರೋಡ್, ರಾಯಚೂರು, ಕೃಷ್ಣಾ, ಯಾದಗಿರಿ, ವಾಡಿ, ಶಹಾಬಾದ, ಕಲಬುರಗಿ ಮತ್ತು ಹುಮನಾಬಾದ ನಿಲ್ದಾಣಗಳಲ್ಲಿ ನಿಲುಗಡೆ ನೀಡಲಿದೆ.ಈ ವಿಶೇಷ ರೈಲು 22 ಬೋಗಿಗಳನ್ನು ಒಳಗೊಂಡಿರಲಿದೆ, ಇದರಲ್ಲಿ ಒಂದು ಎಸಿ 2–ಟೈರ್, ಎರಡು ಎಸಿ 3–ಟೈರ್, ಹನ್ನೊಂದು ಸ್ಲೀಪರ್ ಕ್ಲಾಸ್ ಆರು ಜನರಲ್ ಸೆಕೆಂಡ್ ಕ್ಲಾಸ್, ಮತ್ತು ಎರಡು ಎಸ್‌ಎಲ್‌ಆರ್/ಡಿ ಬೋಗಿಗಳು ಇರಲಿವೆ.

## ಪ್ರಾಧ್ಯಾಪಕ ಸೈಯದ್ ಮಿನ್ಹಾಜ್ ಉಲ್ ಹಸನ್ ಅವರಿಗೆ ಪಿಎಚ್‌ಡಿ ಪದವಿ

ಯುವಮಾರ್ಗ ಸುದ್ದಿ



**ಮಾನ್ವಿ,ಡಿ.1–**ಪಟ್ಟಣದ ಬಾಷುಮಿಯಾ ಸಾಹುಕಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಸೈಯದ್ ಮಿನ್ಹಾಜ್ ಉಲ್ ಹಸನ್ ಅವರಿಗೆ ಉತ್ತರ ಪ್ರದೇಶದ ಅಲಿಗಢ್ ನಲ್ಲಿರುವ ಮಂಗಲಯಾತನ ವಿಶ್ವವಿದ್ಯಾಲಯ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಪಿಎಚ್‌ಡಿ ಪದವಿ ನೀಡಿದೆ.

ಸೈಯದ್ ಮಿನ್ಹಾಜ್ ಉಲ್ ಹಸನ್ ಅವರು ಡಾ. ಮೀನಾ ಚೌಧರಿ ಮತ್ತು ಡಾ. ಜಾವೇದ್ ವಸೀಮ್ ಅವರ ಮಾರ್ಗದರ್ಶನದಲ್ಲಿ 'ಭಾರತೀಯ ಐಟಿ ಉದ್ಯಮಕ್ಕೆ ಸಂಬಂಧಿಸಿದಂತೆ ಕ್ಲೌಡ್ ಪ್ಲಾಟ್‌ಫಾರ್ಮ್‌ಗಳಲ್ಲಿ ಸೈಬರ್ ಭದ್ರತಾ ಅಪಾಯಗಳ ತಡೆಗೆ ಕೃತಕ ಬುದ್ಧಿಮತ್ತೆ( 'Artificial Intelligence in cyber security risk on cloud platforms with reference to Indian IT industry)' ಎಂಬ ವಿಷಯದ ಕುರಿತು ತಮ್ಮ ಸಂಶೋಧನಾ ಪ್ರಬಂಧವನ್ನು ಮಂಡಿಸಿದ್ದರು. ಈ ಕುರಿತು ನ.27 ರಂದು ಮಂಗಲಯಾತನ ವಿಶ್ವವಿದ್ಯಾಲಯ ಪ್ರಮಾಣ ಪತ್ರ ನೀಡಿದ್ದು, ಮುಂಬರುವ ಘಟಿಕೋತ್ಸವದಲ್ಲಿ ಸೈಯದ್ ಮಿನ್ಹಾಜ್ ಉಲ್ ಹಸನ್ ಅವರಿಗೆ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಭಿನಂದನೆ: ಪಿಎಚ್‌ಡಿ ಪದವಿಯನ್ನು ಯಶಸ್ವಿಯಾಗಿ ಪೂರೈಸಿ ಡಾಕ್ಟರೇಟ್ ಗೌರವಕ್ಕೆ ಪಾತ್ರರಾಗಿರುವ ಸಹ ಪ್ರಾಧ್ಯಾಪಕ ಸೈಯದ್ ಮಿನ್ಹಾಜ್ ಉಲ್ ಹಸನ್ ಅವರನ್ನು ಬಾಷುಮಿಯಾ ಸಾಹುಕಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಜೆ.ಎಲ್.ಈರಣ್ಣ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

## ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಮಸ್ಕಿ ಅಭಿನಂದನ್ ಅನಾಥ ಮಕ್ಕಳಿಂದ 18 ಮೇಟ್ಟಿಲು ಪಡಿ ಪೂಜೆ



ಯುವಮಾರ್ಗ ಸುದ್ದಿ

**ಲಿಂಗಸಗೂರು,ಡಿ.1–** ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಬರುವ 17 ನೇ ವಾರ್ಡಿನ ಲಕ್ಷ್ಮೀದೇವಿ ದೇವಸ್ಥಾನದ ಹತ್ತಿರ ಬರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಸಂಜೆ ಅಭಿನಂದನ್ ಸ್ಪೂರ್ತಿ ಧಾಮ ಅನಾಥ ವಿಕಲಚೇತನ ಮತ್ತು ಬಡಮಕ್ಕಳ ಆಶ್ರಮ ವಸತಿ ಶಾಲೆ ಮಕ್ಕಳಿಂದ 18 ಮೆಟ್ಟಿಲು ಪಡಿ ಪೂಜೆಯನ್ನು ಮಕ್ಕಳು ನೆರವೇರಿಸಿದರು. ಪಡಿ ಪೂಜೆಯನ್ನು ಅಭಿನಂದನ್ ಆಶ್ರಮದ ಮಕ್ಕಳಿಂದ ನೆರವೇರಿಸಲು ಲಿಂಗಸಗೂರು ಅಯ್ಯಪ್ಪ ಸ್ವಾಮಿ ದೇವಸ್ಥಾನ ಚಾರಿಟೇಬಲ್ ಟ್ರಸ್ಟ ವತಿಯಿಂದ ಅಭಿನಂದನ್ ಸ್ಪೂರ್ತಿ ಧಾಮ ಅನಾಥ ವಿಕಲಚೇತನ ಮತ್ತು ಬಡ ಮಕ್ಕಳ ಶಾಲೆ ದೇವಸ್ಥಾನ ವತಿಯಿಂದ ಆಹ್ವಾನಿಸಲಾಗಿತ್ತು. ಆಶ್ರಮದ ಮಕ್ಕಳು 18 ಮೆಟ್ಟಿಲು ಪಡಿ ಪೂಜೆ ನೆರವೇರಿಸಿ ಪಡಿ ಪೂಜೆಯಲ್ಲಿ ಅಭಿನಂದನ್ ಸ್ಪೂರ್ತಿ ಧಾಮ ಅನಾಥ ವಿಕಲಚೇತನ ಮತ್ತು ಬಡ ಮಕ್ಕಳ ಆಶ್ರಮ ಸಂಸ್ಥೆಯ ಅಧ್ಯಕ್ಷರಾದ ರಾಮಣ್ಣ ಹಂಪರಗುಂದಿ ಹಾಗೂ ಶ್ರುತಿ ರಾಮಣ್ಣ ಹಂಪರಗುಂದಿ ಅವರನ್ನು ದೇವಸ್ಥಾನ ವತಿಯಿಂದ ಸನ್ಮಾನಿಸಿದರು . ಈ ಸಂದರ್ಭದಲ್ಲಿ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಗುರುಸ್ವಾಮಿಗಳಾದ ಸಿದ್ರಾಮು ಗುರುಸ್ವಾಮಿ ನಗರಗುಂಡ,ಪತ್ರಕರ್ತ ರಾಜೇಶ ಮಾಣಿಕ್,

ಅಯ್ಯಪ್ಪ ಸ್ವಾಮಿ ದೇವಸ್ಥಾನದ ಮಾಲೆಧಾರಿಗಳು,ಹಾಗೂ ಹೊನ್ನಳ್ಳಿ ಅಯ್ಯಪ್ಪ ಸ್ವಾಮಿ ದೇವಸ್ಥಾನ ಮಾಲೆಧಾರಿಗಳು,ಮತ್ತು ಅಯ್ಯಪ್ಪ ಸ್ವಾಮಿ ಭಕ್ತರು ಇದ್ದರು.

## ಕನ್ನಡ ರಾಜ್ಯೋತ್ಸವದ ಅಂಗವಾಗಿ ಕರವೇ ವತಿಯಿಂದ 7ನೇ ವರ್ಷದ ಅನ್ನದಾಸೋಹ

ಯುವಮಾರ್ಗ ಸುದ್ದಿ




**ಲಿಂಗಸಗೂರು,ಡಿ.1–** ತಾಲೂಕಿನ ಕರ್ನಾಟಕ ರಕ್ಷಣಾ ವೇದಿಕೆ ( ಪ್ರವೀಣ್ ಕುಮಾರ ಶೆಟ್ಟಿ ಬಣ )ದ ಸಂಘಟನೆ ತಾಲೂಕ ಘಟಕ ಲಿಂಗಸಗೂರು ವತಿಯಿಂದ 7ನೇ ವರ್ಷದ ಅನ್ನದಾಸೋಹ ಕಾರ್ಯಕ್ರಮವನ್ನು ಶ್ರೀ ಬಸವೇಶ್ವರ ಕಾಲೇಜು ಮುಂದುಗಡೆ ಹಮ್ಮಿಕೊಂಡಿದ್ದು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲಾಯಿತು ಎಂದು ಕರವೇ ತಾಲೂಕ ಅಧ್ಯಕ್ಷ ಆಂಜನೇಯ ಹೆಚ್. ಭಂಡಾರಿ ಹೇಳಿದರು.

ಈ ಸಂದರ್ಭದಲ್ಲಿ ವೆಂಕಟೇಶ್ ಮೇಟಿ, ದಲಿತ ಮುಖಂಡರಾದ ರಮೇಶ್ ಗೋಸ್ಲೆ , ಉಪಾಧ್ಯಕ್ಷರಾದ ಭೀಮೇಶ್ ಎಲ್. ನಾಯಕ, ಕುರುಮೇಶ್ ನಾಯಕ, ಶಿವು ಪತ್ತಾರ್, ಸಿದ್ದು ಚಲುವಾದಿ, ಸಲೀಂ ಖಾನ್, ಅಮರೇಶ್ ರಾಠೋಡ್, ಅಶೋಕ್ ನಾಯಕ, ಉಮೇಶ್ ಕರಡಕಲ್, ರವಿಕುಮಾರ್ ಜೋಗೇರಾ, ಪ್ರೇಮ್ ಕುಮಾರ್ ಪಾಟೀಲ್, ಮೌನೇಶ್ ಬುಳ್ಳಾಪುರ,ಯಲ್ಲಪ್ಪ ದೊಡ್ಡಮನಿ,ಮಹೇಶ್, ಹಾಗೂ ವೀರೇಶ್ ಸೇರಿದಂತೆ ಉಪಸ್ಥಿತರಿದ್ದರು.

## ನಿಮ್ಮ ಹಣ ನಿಮ್ಮ ಹಕ್ಕು ಅಭಿಯಾನಕ್ಕೆ ಚಾಲನೆ



ಯುವಮಾರ್ಗ ಸುದ್ದಿ

**ರಾಯಚೂರು,ಡಿ.1–** ನಗರದ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ನಿಮ್ಮ ಹಣ ನಿಮ್ಮ ಹಕ್ಕು ಎಂಬ ರಾಷ್ಟ್ರ ವ್ಯಾಪಿ ಅಭಿಯಾನಕ್ಕೆ ಬೆಂಗಳೂರಿನ ಆರ್‌ಬಿಐ ಅಧಿಕಾರಿ ಪ್ರಭಾಕರನ್ ಅವರು ಇತ್ತೀಚೆಗೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಅಭಿಯಾನವು 2025ರ ಅಕ್ಟೋ ಬರ್ ರಿಂದ 2025ರ ಡಿಸೆಂಬರ್ ರವರೆಗೆ ನಡೆಯುತ್ತಿದ್ದು, 10 ವರ್ಷಗಳಿಗೂ ಹೆಚ್ಚು ಕಾಲ ನಿಷ್ಕ್ರಿಯವಾಗಿರುವ ಡಿಇಎಎಫ್ ಅಥವಾ ನಿಷ್ಕ್ರಿಯ ಖಾತೆಗಳನ್ನು ಬ್ಯಾಂಕ್‌ಗಳಿಗೆ ಕೆವೈಸಿ ಒದಗಿಸುವ ಮೂಲಕ ಸಕ್ರಿಯಗೊಳಿಸಲಾಗುವುದೆಂದು ತಿಳಿಸಿದರು. ಜಿಲ್ಲೆಯಲ್ಲಿ 3,65,981 ಖಾತೆಗಳ ಪೈಕಿ 82.74 ಕೋಟಿ ರೂ.ಗಳು ಡಿಇಎಎಫ್‌ನಲ್ಲಿವೆ ಎಂದರು.

ಇದೇ ಸಂದರ್ಭದಲ್ಲಿ ಲೀಡ್ ಜಿಲ್ಲಾ ವ್ಯವಸ್ಥಾಪಕರಾದ ಪಾಂಡಪ್ಪ ಸೇರಿದಂತೆ ವಿವಿಧ ಬ್ಯಾಂಕ್‌ಗಳ ವ್ಯವಸ್ಥಾಪಕರು ಇತರರು ಇದ್ದರು.

## ಬಾಷುಮಿಯಾ ಸಾಹುಕಾರ್ ಕಾಲೇಜಿನಲ್ಲಿ ಏಡ್ಸ್ ಜಾಗೃತಿ ಅಭಿಯಾನ

ಯುವಮಾರ್ಗ ಸುದ್ದಿ




**ಮಾನ್ವಿ,ಡಿ.1–** ಬಾಷುಮಿಯಾ ಸಾಹುಕಾರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಏಡ್ಸ್ ಜಾಗೃತಿ ಅಭಿಯಾನವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ತಾಲ್ಲೂಕು ಆಸ್ಪತ್ರೆ ಮಾನ್ವಿಯ ಐ.ಸಿ.ಟಿ.ಸಿ. ಕೌನ್ಸಿಲರ್ ರಾಜೇಶ್ವರಿ ಅವರು ಉದ್ಘಾಟಕರಾಗಿ ಆಗಮಿಸಿ, ವಿದ್ಯಾರ್ಥಿಗಳಿಗೆ ಏಡ್ಸ್ ಹರಡುವಿಕೆ, ಮುನ್ನೆಚ್ಚರಿಕೆ ಹಾಗೂ ಅದರ ಗಂಭೀರ ಪರಿಣಾ ಮಗಳ ಕುರಿತು ಸಮಗ್ರ ಮಾಹಿತಿಯನ್ನು ಹಂಚಿಕೊಂಡರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶು ಪಾಲರಾದ ಜೆ.ಎಲ್. ಈರಣ್ಣ ಅವರು ಮಾತನಾಡಿ, ಏಡ್ಸ್ ಮತ್ತು ಕ್ಯಾನ್ಸರ್‌ನಂತಹ ರೋಗಗಳು ಸಮಾಜಕ್ಕೆ ಮಾರಕವಾಗಿದ್ದು, ಪ್ರತಿಯೊಬ್ಬರೂ ಅವುಗಳ ಬಗ್ಗೆ ಸೂಕ್ತ ಮುನ್ನೆಚ್ಚರಿಕೆ ವಹಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಎನ್.ಎಸ್.ಎಸ್. ಸಂಚಾಲಕರಾದ ಸೈಯದ್ ಮುಜೀಬ್ ಅಹ್ಮದ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ, ಇತ್ತೀಚಿನ ದಿನಗಳಲ್ಲಿ ಏಡ್ಸ್ ಯುವ 'ಜನರಲ್ಲಿ ಹೆಚ್ಚು ಹರಡುತ್ತಿರುವುದು ಆತಂಕಕಾರಿ ಸಂಗತಿ. ಈ ಹಿನ್ನೆಲೆಯಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಇಂತಹ ಜಾಗೃತಿ ಕಾರ್ಯಕ್ರಮಗಳು ಅತ್ಯವಶ್ಯಕವಾಗಿವೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ರೆಡ್ ರಿಬ್ಬನ್ ಕ್ಲಬ್ ಸಂಚಾಲಕರಾದ ಚಂದ್ರು , ಆರೋಗ್ಯ ಇಲಾಖೆಯ ಅಧಿಕಾರಿಗಳು, ಕಾಲೇಜಿನ ಸಾಂಸ್ಕೃತಿಕ ಸಂಚಾಲಕ ರಾದ ಚನ್ನಬಸವ ಇದ್ದರು.

## ಡಿಸೆಂಬರ್ 07ರಂದು ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ

**ರಾಯಚೂರು,ಡಿ.1–** ಪ್ರತಿ ವರ್ಷದಂತೆ ಈ ವರ್ಷವು ಸಹ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯನ್ನು ಕಲಬುರಗಿಯ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರ ಕಚೇರಿಯಲ್ಲಿ ಡಿಸೆಂಬರ್ 07ರ ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮಕ್ಕೆ ಯಾದಗಿರಿ, ಬೀದರ, ರಾಯಚೂರು ಹಾಗೂ ಕಲಬುರಗಿ ಜಿಲ್ಲೆಯ ಮಾಜಿ ಸೈನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08472–225003ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಶ್ವ ಏಡ್ಸ್ ದಿನಾಚರಣೆ




ಯುವಮಾರ್ಗ ಸುದ್ದಿ

**ಲಿಂಗಸಗೂರು,ಡಿ.1–**ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ಜಿಲ್ಲಾ ಏಡ್ಸ್ ತಡೆ ಮತ್ತು ನಿಯಂತ್ರಣ ಘಟಕ ರಾಯಚೂರು ತಾಲೂಕ್ ಆರೋಗ್ಯ ಅಧಿಕಾರಿಗಳು ಕಚೇರಿ ಲಿಂಗಸೂಗೂರ, ತಾಲೂಕು ಸಾರ್ವಜನಿಕ ಆಸ್ಪತ್ರೆ ಲಿಂಗಸುಗೂರು, ಶ್ರೀಅಲ್ಲಮಪ್ರಭು ಪ್ಯಾರಾಮೆಡಿಕಲ್ ಕಾಲೇಜ್ ಲಿಂಗಸಗೂರು & ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಲಿಂಗಸೂಗುರು ಇವರುಗಳ ಸಂಯೋಗದೊಂದಿಗೆ ಸೋಮವಾರ ವಿಶ್ವ ಏಡ್ಸ್ ದಿನಾಚರಣೆಯನ್ನು ಬೆಳಿಗ್ಗೆ 10 ಗಂಟೆ ಗೆ ತಾಲೂಕು ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಶ್ರೀ ಅಂಬರೀಶ್ ಪಾಟೀಲ್ ತಾಲೂಕು ಆರೋಗ್ಯ ಅಧಿಕಾರಿಗಳು.ತಜ್ಞ ವೈದ್ಯರು ಚಾಲನೆ ನೀಡಿದರು

ಕಾರ್ಯಕ್ರಮ ಉದ್ದೇಶಿಸಿ ಡಾ. ಖಾಜಾಹುದ್ದೀನ್ ಹಿರಿಯ ವೈದ್ಯಾಧಿಕಾರಿಗಳು ಮಾತನಾಡಿ, ಎಚ್‌ಐವಿ ಇಂದ ದೂರವಿರಲು ಸರಿಯಾಗಿ ಅರಿತುಕೊಳ್ಳಬೇಕು ಹಾಗೂ ಮುಟ್ಟುವುದರಿಂದ, ಜೊತೆಯಲ್ಲಿ ಇರೋದ್ರಿಂದ ಎಚ್‌ಐವಿ ಹರಡುವುದಿಲ್ಲ ಎಂದು ಮಾಹಿತಿ ನೀಡಿದರು

ತಾಲೂಕು ಆರೋಗ್ಯ ಅಧಿಕಾರಿ ಡಾ: ಅಮರೇಶ ಪಾಟೀಲ್ ರವರು ಎಎಚ್‌ಐವಿ/ ಏಡ್ಸ್ ತಡೆಗಟ್ಟಲು ತಾಲೂಕುಸಾರ್ವಜನಿಕ ಆಸ್ಪತ್ರೆಯಲ್ಲಿ ಆಪ್ತ ಸಮಾಲೋಚಕರು ಸರಿಯಾದ ಮಾರ್ಗದರ್ಶನ ಮತ್ತು ಚಿಕಿತ್ಸೆ ನೀಡುತ್ತಾರೆ, ಸಹಕರಿಸುತ್ತಾರೆ ಹಾಗೂ ಸರ್ಕಾರದಿಂದ ಎಚ್‌ಐವಿ ಬಾಧಿತರು ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಲು

ಡಾ ಶ್ವೇತಾ ನಡುವಿನಮನಿ ನೇತ್ರ ವೈದ್ಯಾಧಿಕಾರಿಗಳು ಹದಿಹರಿಯದ ಮಕ್ಕಳಲ್ಲಿ ಲೈಂಗಿಕ ದೌರ್ಜನ್ಯ ದಿಂದ ಯುವಕ ಯುವತಿಯರಲ್ಲಿ ಎಚ್‌ಐವಿ ಸೋಂಕು ಹರಡದಂತೆ ತಡೆಗಟ್ಟಲು ಪೋಷಕರು ಜಾಗೃತಿ ವಹಿಸಬೇಕೆಂದು ಮಾತನಾಡಿದರು

ಡಾ.ಆಯೇಶಾ ವೈದ್ಯಾಧಿಕಾರಿಗಳು ಇವರು ಸಹ ಯುವಜನರಲ್ಲಿ ಎಚ್‌ಐವಿಪಿಡುಗು ಒಬ್ಬರಿಂದ ಒಬ್ಬರಿಗೆ ಹರಡದಂತೆ ತಡೆಗಟ್ಟಲು ಎಚ್‌ಐವಿ /ಏಡ್ಸ್ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬೇಕು ಲೈಂಗಿಕ ರೋಗಗಳ ಬಗ್ಗೆ ಚಿಕಿತ್ಸೆ ತೆಗೆದುಕೊಳ್ಳುವುದು ಹಾಗೂ ತಂದೆ ತಾಯಿಯಿಂದ ಮಕ್ಕಳಿಗೆ ಎಚ್‌ಐವಿ ಬಾರದಂತೆ ಇರವ ಕುರಿತಾಗಿ ಮಾಹಿತಿ ನೀಡಿದರು

ಡಾ. ರುದ್ರಮುನಿ ಗದ್ದಿ ಇವರು ಸಹ ಎಚ್‌ಐವಿ/ ಏಡ್ಸ್ ಬರೋದಕ್ಕಿಂತ ಮುಂಚೆ ಸ್ವಚ್ಛತೆ ಮತ್ತು ಜಾಗೃತರಾಗಿರೋಣ ಎಂದು ಮಾಹಿತಿ ನೀಡಿದರು

ಶ್ರೀ ಅಲ್ಲಮ್ಮ ಪ್ರಭು ಪ್ಯಾರಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಎಚ್‌ಐವಿ /ಏಡ್ಸ್ ಬಗ್ಗೆ ಘೋಷಣೆ ,ಯೊಂದಿಗೆ ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

ವಿಶ್ವ ಏಡ್ಸ್ ದಿನಾಚರಣೆ ಜಾಗೃತಿಯ ಜಾಥ ವನ್ನು ಘೋಷಣೆ ಮೂಲಕ ತಾಲೂಕು ಸಾರ್ವಜನಿಕ ಆಸ್ಪತ್ರೆಯಿಂದ, ಹನುಮಾನ್ ಮಂದಿರ್, ಗಡಿಯಾರ ಚೌಕ್, ಯಮನೂರಪ್ಪ ದರ್ಗಾ ಮತ್ತು ಬಳಿಗಾರ ಓಣಿ ಮರಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೊನೆಗೊಳಿಸಲಾಯಿತು

ಈ ಕಾರ್ಯಕ್ರಮದಲ್ಲಿ ಭಾಗವಹಿಸಿದವರು ಸೆಂಟ್ ಲುಕ್ ಮೆಡಿಕಲ್ ಸೊಸೈಟಿ ಮತ್ತು ಹೊಸ ಬೆಳಕು ಸಂಸ್ಥೆ ಸಿಬ್ಬಂದಿಗಳು ಭಾಗವಹಿಸಿದ್ದರು,ಪ್ರಾಣೇಶ್ ಜೋಶಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು, ಸರಕಾರಿ ನೌಕರರ ಸಂಘ ದ ಅಧ್ಯಕ್ಷ ಹಾಜಿಬಾಬು ಕಲ್ಯಾಣಿ ಶಿವಲೀಲಾ ಮೇಟಿ. ಪದ್ಮಾವತಿ ನಾಯಕ್. ವಸೀಂರೆಹಮಾನ್. ಸತೀಶ್ ದರ್ಶನಕರ್, ರವಿಬೆಳಿಗಾರ್, ಸಣ್ಣ ಉಪ್ಪಳಪ್ಪ, ಎ. ಆರ್. ಟಿ ಸಿಬ್ಬಂದಿಗಳಾದ ಮಹೇಶ್ ಗೌಡ,ವಿಜಯಲಕ್ಷ್ಮಿ,ರವಿ ಎ ಆರ್ ಟಿ,ವೀರೇಶ್, ಭವಾನಿ

ಎನ್‌ಟಿಇಪಿ ಸಿಬ್ಬಂದಿಗಳಾದ ರವಿ ಹೂಗಾರ್, ಅಂಬರೀಶ್ ಎಲಿಗಾರ್ ಮತ್ತು ಮಹಾಂತೇಶ್ ಬ್ಯಾಳಿ.ಇಲಿಯಾಸ.ಸತ್ತಾರ ಪಾಶಾ. ಮತ್ತು ಆರೋಗ್ಯ ಇಲಾಖೆ ಎಲ್ಲಾ ಸಿಬ್ಬಂದಿಗಳು ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಯು ಸದಸ್ಯರಾದ ಶಾಮೀದಸಾಬ.ಮರ್ತುಜಸಾಬ.ಬಾಬುಕರಡಿ.ಜಾವಿದ್.ಶಹಜಾದ ಸಲಿಂ.ವಿರುಪಾಕ್ಷಿ ವಾಸೀಮ್.ಅಮರೇಶ.ಇನ್ನಿತರರಿದ್ದರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H